

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119



Volume : 07 Issue : 17 Thursday 19-09-2024 E-mail : maruti.b.hosamani76@gmail.com Page: 4 Price : Rs. 1/-


## "ಯಾವ ಹೂವು ಯಾರ ಮುಡಿಗೋ" ಕಿರು ಚಿತ್ರ ಶೀಘ್ರದಲ್ಲೇ ಬಿಡುಗಡೆ





**ಸಿಹಿ ಕಹಿ ಸುದ್ದಿ**

**ಮೈಸೂರು** : ಎ.ಎಸ್.ಆರ್ ಫಿಲ್ಮ್ಸ್ ನಿರ್ಮಾಣದಲ್ಲಿ ಯುವ ಪ್ರತಿಭೆಗಳ "ಯಾವ ಹೂವು ಯಾರ ಮುಡಿಗ" ಕಿರುಚಿತ್ರ ಸದ್ದಿಲ್ಲದೆ ಚಿತ್ರೀಕರಣ ಮುಗಿಸಿದ್ದು, ಸಧ್ಯದಲ್ಲೇ ಬಿಡುಗಡೆ ಆಗಲಿದೆ ಎಂದು ನಿರ್ದೇಶಕ ,ಛಾಯಾಗ್ರಾಹಕ ಮೈಸೂರ್ ಸೋಮು ತಿಳಿಸಿದ್ದಾರೆ.

ಸುಮಾರು ನಾಲ್ಕು ವರ್ಷಗಳಿಂದ ಚಿತ್ರರಂಗದಲ್ಲಿ ಲೈಟ್ ಬಾಯ್ ಹಾಗೂ ಅಸಿಸ್ಟೆಂಟ್ ಕ್ಯಾಮರಾ ಮ್ಯಾನ್ ಆಗಿ ಕೆಲಸ ಮಾಡಿರುವ ಮೈಸೂರ್ ಸೋಮು ಇದೀಗ ಸ್ವತಃ ತಾವೇ "ಯಾವ ಹೂವು ಯಾರ ಮುಡಿಗೋ" ಕಿರು ಚಿತ್ರವನ್ನು ನಿರ್ದೇಶನ ಹಾಗೂ ಛಾಯಾಗ್ರಹಣ ಮಾಡಿದ್ದಾರೆ. ಸಧ್ಯದಲ್ಲೇ ತೆರೆಗೆ ಬರಲಿರುವ ಕನ್ನಡ ಶಾಲೆಯ ಜಾಗೃತಿ ಕುರಿತ ಭೈರವಿ ಕ್ರಿಯೇಷನ್ಸ್ ನಿರ್ಮಾಣದ ಬಾಲ ನಟಿ ಭೈರವಿ ಅಭಿನಯದ ಕಾರ್ತಿಕರಾಮ್ ನಿರ್ದೇಶನದ 'ನುಡಿಮುತ್ತು' ಚಲನ ಚಿತ್ರಕ್ಕೆ ಪೂರ್ಣ ಪ್ರಮಾಣದ ಛಾಯಾಗ್ರಾಹಕರಾಗಿ ಕೆಲಸ ಮಾಡಿರುವ ಸೋಮು ಅವರ ಈ ಕಿರು ಚಿತ್ರದಲ್ಲಿ ನಾಯಕ ನಟ ಲೋಕೇಶ್ ಹಳೇಬೀಡು, ನಾಯಕಿಯಾಗಿ ಅನು ಶಿವಮೊಗ್ಗ, ಹಿರಿಯ ಕಲಾವಿದರಾಗಿ ಆನಂದ್ ಬಾಬು ಮಂಡ್ಯ ಹಾಗೂ ಸಂದರ್ಶ ಹುಲಿಯೂರುದುರ್ಗ ಅಭಿನಯಿಸಿದ್ದಾರೆ. ಮೈಸೂರು ಸುತ್ತ ಮುತ್ತ ಮೂರು ದಿನಗಳ ಕಾಲ ಸತತ ಚಿತ್ರೀಕರಣ ನಡೆಸಲಾಗಿದೆ. ಚಿತ್ರಕ್ಕೆ ರೋಲ್ ಕಟ್ ಮೀಡಿಯಾ ಹೌಸ್ ನ ವಿನಯ್ ರಾಂಪುರೆ ಸಂಕಲನ, ರಿಕಾರ್ಡಿಂಗ್ ಮ್ಯೂಸಿಕ್ ವಿಸ್ತನ್ಸ್ ಸ್ಟುಡಿಯೋದವರು ಸಂಗೀತ ನೀಡಿದ್ದು ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ,ಡಾ.ವೀರೇಶ ಹಂಡಿಗಿ ಅವರದಿದೆ. ಮುಖ್ಯವಾಗಿ ಯುವಕರು ಯುವತಿಯರು ನೋಡಲೇ ಬೇಕಾದಂತಹ ಕಂಟೆಂಟ್ ಈ ಕಿರು ಚಿತ್ರದಲ್ಲಿದ್ದು ಇದೇ ತಿಂಗಳಲ್ಲೇ ಎ.ಎಸ್.ಆರ್ ಕ್ರಿಯೇಷನ್ ಕನ್ನಡ ಯೂಟ್ಯೂಬ್ ಚಾನೆಲ್ ನಲ್ಲಿ ಬಿಡುಗಡೆಯಾಗಲಿದೆ. ಕರ್ನಾಟಕದ ಜನತೆ ಈ ಚಿತ್ರವನ್ನು ನೋಡಿ ಯುವ ಕಲಾವಿದರು, ತಂತ್ರಜ್ಞರನ್ನು ಪ್ರೋತ್ಸಾಹಿಸಿ ಯಶಸ್ವಿ ಮಾಡುವಂತೆ ನಿರ್ದೇಶಕ ಸೋಮು ಕೋರಿದ್ದಾರೆ.

*****

**ವರದಿ:**
**ಡಾ.ಪ್ರಭು ಗಂಜಿಹಾಳ.**
**ಮೊ:9448775346**

## ಧರ್ಮಸ್ಥಳ ಸಂಘ ದಿಂದ ಮದ್ಯ ವ್ಯಸನೀಯರಿಗೆ ಕೂಡ್ಲಿಗಿಯಲ್ಲಿ 1853ನೇ ಮಧ್ಯ ವರ್ಜನಾ ಶಿಬಿರ 8 ದಿನಗಳ ಕಾಲ ಕಾರ್ಯಕ್ರಮ ನಡೆಯಿತು



**ಕೂಡ್ಲಿಗಿ** : ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದ ಕೊಟ್ಟೂರು ರಸ್ತೆಯಲ್ಲಿ ಬರುವ ಮಹರ್ಷಿ ವಾಲ್ಮೀಕಿ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ಮತ್ತು ಜಿಲ್ಲಾ ಜನ ಜಾಗೃತಿ ವೇದಿಕೆ ವಿಜಯನಗರ, ಮತ್ತು ಮದ್ಯವರ್ಜನ ಶಿಬಿರ ವ್ಯವಸ್ಥಾಪನ ಸಮಿತಿ ಕೂಡ್ಲಿಗಿ ಮತ್ತು ವಿವಿಧ ಸಂಘಸಂಸ್ಥೆಗಳುಇವರಸಂಯುಕ್ತ ಆಶ್ರಯದಲ್ಲಿ ಪರಮ ಪೂಜ್ಯ ರಾಜರ್ಷಿ ಡಾ, ಡಿ ವೀರೇಂದ್ರ ಹೆಗಡೆಯವರು ಹಾಗೂ ಮಾತೃಶ್ರೀ ಡಾ, ಹೇಮಾವತಿ ಯವರ ಆದೇಶದಂತೆ 1853 ನೇ ಮದ್ಯವರ್ಜನ ಶಿಬಿರ ಉದ್ಘಾಟನಾ ಕಾರ್ಯಕ್ರಮ ನಡೆಸಲಾಯಿತು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಶ್ರೀ ಷ. ಬ್ರ. ಪ್ರಶಾಂತ ಸಾಗರ ಶಿವಾಚಾರ್ಯ ಮಹಾ ಸ್ವಾಮಿಜಿಗಳು, ಶಿಬಿರಾರ್ಥಿಗಳನ್ನ ಉದ್ದೇಶಿಸಿ ಮಾತನಾಡಿದರು, ಈ ಪುಣ್ಯ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ ಮದ್ಯ ವ್ಯಸನದ ಅಮಲಿನಿಂದ ಹೊರಬಂದು ಇಲ್ಲಿ ಸೇರಿರುವಂತ ಎಲ್ಲಾ ಶಿಬಿರಾರ್ತಿಗಳೇ ನಿಮ್ಮ ಕುಟುಂಬದಲ್ಲಿ ನೀವುಗಳು ಹೊಸ ಜೀವನ ರೂಪಿಸಿ ಕೊಳ್ಳುವಂತೆ ಆಶೀರ್ವದಿಸಿದರು.

ಕಾರ್ಯಕ್ರಮದ ಉದ್ಘಾಟನೆ ಮಾಡಿದ ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಕಾವಲಿ ಶಿವಪ್ಪ ನಾಯಕ ಇವರು 8 ದಿನ ನಡೆಯುವ ಶಿಬಿರದಲ್ಲಿ ಪ್ರತಿಯೊಬ್ಬರು ಮಾಹಿತಿ ಪಡೆದು ಕೊಂಡು ಉತ್ತಮ ನಾಗರಿಕರಾಗಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಣಕಾರ್ ವೀರಣ್ಣ ಇವರು ವಹಿಸಿದ್ದು. ಕಾರ್ಯಕ್ರಮಕ್ಕೆ ಮತ್ತು ಎಲ್ಲ ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ಮತ್ತು ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ, ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯರು, ಮದ್ಯವರ್ಜನ ಶಿಬಿರದ ಗೌರವಧ್ಯಕ್ಷರು, ಉಪಾಧ್ಯಕ್ಷರುಗಳು, ಗೌರವ ಸಲಹೆಗಾರರು, ಜಿಲ್ಲಾ ನಿರ್ದೇಶಕರು, ಕಾರ್ಯಕ್ರಮಕ್ಕೆ ಸಹಕಾರ ನೀಡಿದ ತಾಲೂಕಿನ ಅನೇಕ ಗಣ್ಯರು, ವಕೀಲರು, ಉದ್ಯಮಿಗಳು, ಪತ್ರಕರ್ತರು, ಮಾದ್ಯಮ ದವರು, ಜನ ಜಾಗೃತಿ ಯೋಜನಾಧಿಕಾರಿಗಳು, ಕ್ಷೇತ್ರ ಯೋಜನಾಧಿಕಾರಿಗಳು, ಅನೇಕ ಸಂಘ ಸಂಸ್ಥೆಯ ಮುಖ್ಯಸ್ಥರುಗಳು ಭಾಗವಹಿಸಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ಕಾರ್ಯಕ್ರಮದಲ್ಲಿ 90 ಕ್ಕಿಂತ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿರುತ್ತಾರೆ. ಮತ್ತು ಈ ಕಾರ್ಯಕ್ರಮದಲ್ಲಿ ಯೋಜನೆಯ ಮೇಲ್ವಿಚಾರಕ ಶ್ರೇಣಿಯ ಕಾರ್ಯಕರ್ತರು, ಸೇವಾ ಪ್ರತಿನಿಧಿಗಳು, ನವ ಜೀವನ ಸಮಿತಿಯ ಸ್ವಯಂ ಸೇವಕರು ಪಾಲ್ಗೊಂಡಿದ್ದರು.

ಹಾಗೆ ಈ ಸಂದರ್ಭದಲ್ಲಿ ಕ.ರ. ವೇ ತಾಲೂಕು ಅಧ್ಯಕ್ಷರು ಕಾಟೇರ್ ಹಾಲೇಶ್, ಕ.ರ.ವೇ ತಾಲೂಕು ಮಹಿಳಾ ಅಧ್ಯಕ್ಷರು ಲಕ್ಷ್ಮಿ ದೇವಿ, ಬಿಜೆಪಿ ತಾಲೂಕು ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಎ.ದಿಬ್ಬದ ಹಳ್ಳಿ ವಿ.ಎಸ್ ಎಸ್. ಎನ್ ಅಧ್ಯಕ್ಷರು ಸಿದೇಶ್, ಹಾಗೂ ಡಿ.ಎಸ್.ಎಸ್ ತಾಲೂಕು ಸಂಚಾಲಕ ದುರುಗೇಶ್ ವಕೀಲರು, ಖಾನಾವಳಿ ಕೊಟ್ರೇಶ್, ಬಿಜೆಪಿಯ ಪವಿತ್ರ, ಕಾಂಗ್ರೆಸ್ ಕಾರ್ಮಿಕ ಸಂಘದ ಜಿಲ್ಲಾ ಕಾರ್ಯದರ್ಶಿ ಮಹೇಂದ್ರ ಸ್ವಾಮೀ, ಹಾಗೂ ಇನ್ನೂ ಅನೇಕ ಮುಖಂಡರು ಈ ಕಾರ್ಯಕ್ರಮ ದಲ್ಲಿ ಭಾಗವಹಿಸಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ.ಬಿ. ಸಾಲುಮನೆ.ಕೂಡ್ಲಿಗಿ. ವಿಜಯನಗರ**

## ಡಾ, ವಿಷ್ಣುವರ್ಧನ್ ರವರು ಅಭಿಮಾನಿಗಳ ಮನದಲ್ಲಿ-ಎಂದಿಗೂ ಜೀವಂತ ಅಧ್ಯಕ್ಷ ಎ.ಸಿ ಚೇತನ್



**ಖಾನಾ ಹೊಸಹಳ್ಳಿ** : ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಹೊಸಹಳ್ಳಿ ಪಟ್ಟಣದ ಜೇಡರ ದಾಸಿಮಯ್ಯ ವೃತ್ತದ ಬಳಿ ಡಾ. ವಿಷ್ಣುವರ್ಧನ್ ಅವರ 74 ನೇ ವರ್ಷದ ಜನ್ಮದಿನದ ಪ್ರಯುಕ್ತ ಕೇಕ್ ಕತ್ತರಿಸುವುದರ ಮೂಲಕ ಮತ್ತು ಹಣ್ಣುಗಳನ್ನು ಹಂಚಿದರು. ನಂತರ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಎ.ಸಿ.ಚೇತನ್ ಮಾತನಾಡಿ ಕನ್ನಡ ಚಿತ್ರರಂಗ ಕಂಡ ಮೇರು ನಟ ತಮ್ಮ ಕಲಾವಂತಿಕೆ ಮತ್ತು ವ್ಯಕ್ತಿಗಳಿಂದ ಜನ ಮಾನಸದಲ್ಲಿ ಶಾಶ್ವತ ಸ್ಥಾನ ಪಡೆದು ಕೊಂಡು ಕರುನಾಡಿನ ಜಮೀನ್ದಾರ, ಸಾಹಸಸಿಂಹ, ವಂಶವೃಕ್ಷ, ಆಪ್ತಮಿತ್ರ, ಯಜಮಾನ, ಭೂತಯ್ಯನ ಮಗ ಅಯ್ಯು, ಮುತ್ತಿನ ಹಾರ, ಸೂರಪ್ಪ, ದಿಗ್ಗಜರು, ಸೇರಿದಂತೆ ಅನೇಕ ಚಲನ ಚಿತ್ರಗಳನ್ನು ನಟಿಸಿದ್ದಾರೆ. ಎಂದು ಇದೇ ಸಂದರ್ಭದಲ್ಲಿ ಸ್ಮರಿಸಿದರು, ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಎ.ಸಿ ಚೇತನ್, ನಾಗೇಶ್ ಎಸ್ ಕೆ, ನಾಗೇಶ್ ಎನ್ಎಂ, ಎಟಿ,ಬಸವರಾಜ್, ಡಿಕೆ ಶ್ರೀಧರ,ವೀರೇಶ್,ಬಾಬು, ಚಂದನ್, ಜಾಕಿ ಶಿವರಾಂ, ಅನಿಲ್, ಹಣ್ಣು ಹಂಚುವುದರ ಮೂಲಕ ಸಂಭ್ರಮಿಸಿದರು ,

ಸೇರಿದಂತೆ ಡಾ. ವಿಷ್ಣುವರ್ಧನ್ ರವರ ಅಭಿಮಾನಿಗಳು, ಯುವಕರು ಸೇರಿದಂತೆ ಸಾರ್ವಜನಿಕ ರೈತರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

## ತಂಬಾಕು ರಹಿತ ಜೀವನ ಉತ್ತಮ ಆರೋಗ್ಯಕ್ಕೆ ಸೋಪಾನ



**ಸಿಹಿ ಕಹಿ ಸುದ್ದಿ**

**ಸಂಗಮ ಕ್ರಾಸ್** : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ ಉಪ ಕೇಂದ್ರ ಬೆನಕಟ್ಟಿ ವ್ಯಾಪ್ತಿಯ ಸಂಗಮ ಕ್ರಾಸ್ ದಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ತಯಾರಿಕೆ ನಿಷೇಧ ಕಾನೂನು ಜಾಗೃತಿ ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿಯವರು, ತಂಬಾಕು ಉತ್ಪನ್ನಗಳ ಮಾರಾಟ ತಯಾರಿಕೆ ಕಾನೂನು ಪ್ರಕಾರ ಅಪರಾಧ.18 ವರ್ಷ ದೊಳಿಗಿನವರು ತಂಬಾಕು ಉತ್ಪನ್ನಗಳ ಮಾರಾಟ ತಯಾರಿ-ಕೆ ನಿಷೇಧ ಕಾನೂನು ಜಾರಿಯಲ್ಲಿದೆ. ತಂಬಾಕು ಉತ್ಪನ್ನಗಳಾದ ಸಿಗರೇಟು ಗುಟ್ಕಾ ತಂಬಾಕು ಸೇವನೆ ಅಪಾಯಕಾರಿ ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಇದರಿಂದ ನರ ದೌರ್ಬಲ್ಯ, ರಕ್ತದೊತ್ತಡ ರಕ್ತ ಹೀನತೆ ಮಾನಸಿಕ ಒತ್ತಡ ಅನೇಕ ಮಾರಣಾಂತಿಕ ಕಾಯಿಲೆಗಳು ಆವರಿಸಿ ಮಾನವನನ್ನು ನರಕ ಕೂಪಕ್ಕೆ ತಳ್ಳಿ ನರಳುವಂತೆ ಮಾಡುತ್ತದೆ.ಆದ್ದರಿಂದ ತಂಬಾಕು ಉತ್ಪನ್ನಗಳ ಮಾರಾಟ ತಯಾರಿಕೆ ನಿಷೇಧ ಕಾನೂನು ಪಾಲನೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಆದ್ಯತೆ ನೀಡಬೇಕು."ತಂಬಾಕು ರಹಿತ ಜೀವನ ಆರೋಗ್ಯಕರ ಜೀವನ ಶೈಲಿ" ಆರೋಗ್ಯವಂತ ಕುಟುಂಬ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಸಾರ್ವಜನಿಕರ ಸಹಕಾರ ಅಗತ್ಯ ಹಾಗೂ ತಂಬಾಕು ಉತ್ಪನ್ನಗಳ ಮಾರಾಟ ತಯಾರಿಕೆ ನಿಷೇಧ ಕಾನೂನು ಸಾರ್ವಜನಿಕ ವಲಯಗಳಲ್ಲಿ ಮುಕ್ತ ಮಾಡಲು ಶ್ರಮಿಸಬೇಕು ಎಂದರು.

ತಂಬಾಕು ಉತ್ಪನ್ನಗಳ ಮಾರಾಟ ತಯಾರಿಕೆ ನಿಷೇಧ ಕಾನೂನು ಜಾಗೃತಿ ಕಾರ್ಯಕ್ರಮದಲ್ಲಿ ಸಂಗಮ ಕ್ರಾಸ್ ವ್ಯಾಪಾರಸ್ಥರಾದ ಸಂತೋಷ ಅಂಗನವಾಡಿ, ಬಸಯ್ಯ ಪೂಜಾರಿ, ಮಾರುತಿ ಕೋಟಿ, ಕಾಸಪ್ಪ ಕಂದಗಲ್, ಪರಸಪ್ಪ ಕಾರಜೋಳ, ಬಸಪ್ಪ ಬಡಿಗೇರ ಸಂಗಮಕ್ರಾಸ್ ವ್ಯಾಪಾರಸ್ಥರು ಕಿರುಕುಳ ವ್ಯಾಪಾರಸ್ಥರು ವಿವಿಧ ಗ್ರಾಮಗಳ ಗ್ರಾಹಕರು ಮುಖಂಡರು ಯುವಕರು ಭಾಗವಹಿಸಿದ್ದರು.

## ಗೌರವ ಧನ ಬಿಡುಗಡೆಗೆ ರಾಜ್ಯ ಸರ್ಕಾರಕ್ಕೆ – ಮಾಂತೇಶ ಬಸರಗಿ ಒತ್ತಾಯ



**ಸಿಹಿ ಕಹಿ ಸುದ್ದಿ,**

**ಜಮಖಂಡಿ** : ರಾಜ್ಯ ಸರ್ಕಾರವು ನಾಲ್ಕು ತಿಂಗಳಾದರೂ ಅತಿಥಿ ಶಿಕ್ಷಕರ ಗೌರವ ಧನವನ್ನು ಬಿಡುಗ-ಡೆ ಮಾಡಿಲ್ಲ ರಾಜ್ಯ ಸರ್ಕಾರವು ಅತಿಥಿ ಶಿಕ್ಷಕರ ವೇತನ ಬಿಡುಗಡೆ ಮಾಡಬೇಕು, ವಿಳಂಬ ಧೋರಣೆ ತೋರಿದರೆ ರಾಜ್ಯದಾದ್ಯಂತ ಉಗ್ರ ಹೋರಾಟವನ್ನು ಮಾಡ ಬೇಕಾಗುತ್ತದೆ. ಸಾಮಾಜಿಕ ಹೋರಾಟಗಾರ ಮತ್ತು ಅಧ್ಯಕ್ಷರು ಪ್ರಾಥಮಿಕ ಶಾಲಾ ಮತ್ತು ಪ್ರೌಢ ಶಾಲಾ ಅತಿಥಿ ಶಿಕ್ಷಕರ ಸಂಘ ಜಮಖಂಡಿ ಮಾಂತೇಶ ಬಸರಗಿ ರಾಜ್ಯ ಸರ್ಕಾರಕ್ಕೆ ಎಚ್ಚರಿಸಿದರು.

ಮಾಂತೇಶ ಬಸರಗಿ ಮಾತನಾಡುತ್ತಾ ರಾಜ್ಯ ಸರ್ಕಾರ ಆರ್ಥಿಕ ಇಲಾಖೆಯ ವೇತನ ಹೆಚ್ಚಳದ ಕುರಿತು ಕಳುಹಿಸಿದ ಕಡಿತದ ಸಂಖ್ಯೆ 166 ಎಸ್ ಇ ಎಸ್ 202 ಇದರ ಪ್ರಕಾರ ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರ ವೇತನ 10,000 ದಿಂದ 15000 ಕ್ಕೆ ಏರಿಕೆ ಯಾಗಬೇಕು ಪ್ರೌಢ ಶಾಲಾ ಅತಿಥಿ ಶಿಕ್ಷಕರ ವೇತನ 10500 ರಿಂದ 16 ಸಾವಿರಕ್ಕೆ ಏರಿಕೆ ಮಾಡಬೇಕು ಈ ಪ್ರಸ್ತಾವನೆಯನ್ನು ಸಹಮತಿಗೆ ಆರ್ಥಿಕ ಇಲಾಖೆಗೆ ಅರ್ಜಿ ಸಲ್ಲಿಸಲಾಗಿದೆ.


ಇಂದಿನ ಅತಿಥಿ ಶಿಕ್ಷಕರ ಬದುಕಿನ ಆಶಾಕಿರಣವಾಗಿರುವ ಸಂಬಳವು ಸಿಗದೇ ಇದ್ದ ಮತ್ತೊಂದು ಕೆಲಸವು ಸಿಗದೇ ಅತಿಥಿ ಶಿಕ್ಷಕರು ಪರದಾಡುವ ಪರಿಸ್ಥಿತಿ ಉಂಟಾಗಿದೆ ಅತಿಥಿ ಶಿಕ್ಷಕರ ವೇದನೆಯನ್ನು ಕೇಳುವರು ಯಾರು ಇಲ್ಲದಂತಾಗಿದೆ ಸರ್ಕಾರವು ಸಚಿವರು ಪ್ರತಿಪಕ್ಷ ನಾಯಕರು ಕೂಡ ಅತಿಥಿ ಶಿಕ್ಷಕರ ಸಮಸ್ಯೆ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ರಾಜಕುಮಾರ್ ತೇಲಿ, ಶಿವಲಿಂಗ ಮಾಳಿ, ಶ್ರೀಶೈಲ್ ಬಿರಾದಾರ್ ರವೀಂದ್ರ ರತ್ನಾಕರ್, ಅಣ್ಣಪ್ಪ ದಡ್ಡಿಮನಿ, ರಮೇಶ್ ಕಾಕಂಡಕಿ, ಚಂದ್ರಕಾಂತ್ ಬ್ಯಾಡಗಿ, ಗಿರೀಶ್ ಕಾಂಬಳೆ, ಮುಂತಾದವರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ. ಇಲಕಲ್ಲ**

## ಗ್ರಾಮ ಪಂಚಾಯಿತಿ ವತಿಯಿಂದ ವಿಶ್ವ ಕರ್ಮ ಹಾಗೂ ಕಲ್ಯಾಣ ಕರ್ನಾಟಕ ವಿಮೋಚನೆ ಆಚರಣೆ





**ಖಾನಾ ಹೊಸಹಳ್ಳಿ** : ಗ್ರಾಮ ಪಂಚಾಯಿತಿಯಲ್ಲಿ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಮತ್ತು ದೇವಶಿಲ್ಪಿ ವಿಶ್ವಕರ್ಮರ ಜಯಂತಿಯನ್ನು ಅರ್ಥ ಪೂರ್ಣವಾಗಿ ಆಚರಿಸಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಎ.ಸಿ ಚೇತನ್ ಅವರ ಉಪಸ್ಥಿತಿಯಲ್ಲಿ ಕಲ್ಯಾಣ ಕರ್ನಾಟಕ ವಿಮೋಚನೆಯ ಹರಿಕಾರ ಸರದಾರ್ ವಲ್ಲಭಭಾಯಿ ಪಟೇಲ್, ಮಹಾತ್ಮ ಗಾಂಧೀಜಿ, ಡಾ, ಬಿ.ಆರ್. ಅಂಬೇಡ್ಕರ್, ಮತ್ತು ವಿಶ್ವಕರ್ಮ ರವರ ಭಾವ ಚಿತ್ರಕ್ಕೆ ಪೂಜೆ ಪುಷ್ಪ ನಮನ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಕರ್ನಾಟಕದ ಉಳಿದ ಎಲ್ಲಾ ಭಾಗಗಳಲ್ಲಿ ವರ್ಷಕ್ಕೆ ಒಂದು ಬಾರಿ ಸ್ವತಂತ್ರ ದಿನಾಚರಣೆ ಆಚರಿಸಿದರೆ ಕಲ್ಯಾಣ ಕರ್ನಾಟಕದ ಜನರು ಮಾತ್ರ ಎರಡು ಬಾರಿ ಸ್ವತಂತ್ರ ದಿನಾಚರಣೆಯನ್ನು ಆಚರಿಸುತ್ತಾರೆ. ಆಗಸ್ಟ್ 15 ರಂದು ಬ್ರಿಟಿಷರ ದಾಸ್ಯದಿಂದ ಹೊರಬಂದ ಸಂಭ್ರಮವಾದರೆ, ಸೆಪ್ಟೆಂಬರ್ 17 ನಿಜಾಮರ ಮತ್ತು ಜಕಾರ ದಬ್ಬಾಳಿಕೆ ಯಿಂದ ಹೊರಬಂದು ಭಾರತದ ಒಕ್ಕೂಟಕ್ಕೆ ಸೇರಿದ ಸುದಿನವನ್ನು ನೆನಪಿಸಿ ಕೊಳ್ಳುತ್ತಾರೆ.

ಸಂಪೂರ್ಣ ಶ್ರೇಯೋ ಭಾರತದ ಪರ ಸೇರಿ ಕೊಳ್ಳಲು ರಜಾಕರ ವಿರುದ್ಧ ಹೋರಾಡಿ ಪ್ರಾಣಾರ್ಪಣೆ ಮಾಡಿದ ಎಲ್ಲಾ ಸ್ವತಂತ್ರ ಹೋರಾಟಗಾರರನ್ನು ಸ್ಮರಿಸಿದರು,

ಹೊಸಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿನಯ್ ಕುಮಾರ್, ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ನಾಗರಾಜ್, ಗ್ರಾಮ ಪಂಚಾಯತಿ ಕಾರ್ಯದರ್ಶಿ ನಾಗರಾಜ್, ಗ್ರಾಮ ಪಂಚಾಯಿತಿಯ ಸಿಬ್ಬಂದಿ ವರ್ಗದವರು ಹೊಸಹಳ್ಳಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರು ನೇತ್ರಮ್ಮ ಮಂಜುನಾಥ,ಸದಸ್ಯರು, ಸಿಬ್ಬಂದಿ ವರ್ಗದವರು, ಮದರ್ ತರೇಸಾ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದವರು, ಊರಿನ ಮುಖಂಡರು ಸೇರಿದಂತೆ ಇತರ ಸಾರ್ವಜನಿಕರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ.**

## ಪೊಲೀಸ್ ಠಾಣೆಯಲ್ಲಿ ಕಾನೂನು ಅರಿವು ಪಡೆದು ಕೊಂಡ-ಧರ್ಮಸ್ಥಳದ ಸಂಘದ ಮಹಿಳೆಯರು



**ಸಿಹಿ ಕಹಿ ಸುದ್ದಿ**

**ಕೊಟ್ಟೂರು** : ಪೊಲೀಸ್ ಠಾಣೆಯಲ್ಲಿ ಧರ್ಮಸ್ಥಳ ಸಂಘದ ಮಹಿಳೆಯರಿಗೆ ಪಿ.ಎಸ್.ಐ ಗೀತಾಂಜಲಿ ಸಿಂಧೆ ರವರು ಮಾರ್ಗ ದರ್ಶನದ ಮೂಲಕ ಕಾನೂನು ಅರಿವು. ಕಾರಟಗಿ ತಾಲೂಕಿನ ಸಮನ್ವಯ ಅಧಿಕಾರಿ ಶಿಕ್ಷೇತರ ಧರ್ಮಸ್ಥಳ ಜ್ಞಾನ ವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಕ್ಷೇತ್ರ ಅಧ್ಯಯನದ ಪ್ರವಾಸ ಗೊಂಡ ಮಹಿಳೆಯರಿಗೆ ಕೊಟ್ಟೂರು ಪೊಲೀಸ್ ಠಾಣೆಯಲ್ಲಿ ಕಾನೂನು ಅರಿವು ಕೆ. ವಿಷ್ಣುವರ್ಧನ್ ತಿಳಿಸಿದರು. ಮತ್ತು ಸ್ವಾಗತ ಅಧಿಕಾರಿಯಾಗಿ ಜಿ. ಚಂದ್ರಶೇಖರ್ ಕೆಲ ಮಾಹಿತಿ ನೀಡಿ ಭಯಪಡುವ ಅವಶ್ಯಕತೆ ಇಲ್ಲ ಹಾಗೇನೆ ಮಹಿಳೆಯರು ನಿರ್ಭೀತಿ ಇಲ್ಲದೆ ಯಾವುದೇ ವಿಷಯದ ಬಗ್ಗೆ ದೂರನ್ನು ಸಲ್ಲಿಸಬಹುದು ಮತ್ತು ಮನೆಯಲ್ಲಿ ಗಾಡಿ ಇರುವ ಬೈಕ್ ಸವಾರರಿಗೆ ಹೆಲ್ಮೆಟ್ ಬಳಸಿ ಎಂದು ಹೇಳಬೇಕು ಮತ್ತಿತರ ವಿಷಯದ ಬಗ್ಗೆ ತಿಳಿಸಿ ಕೊಟ್ಟರು. ಈ ಸಂದರ್ಭದಲ್ಲಿ ರೇವಣ ಸಿದ್ದಪ್ಪ ಪೊಲೀಸರು ಧರ್ಮಸ್ಥಳದ ಸಂಘದ ಮಹಿಳೆಯರು ಸೇರಿದ್ದರು. ಮತ್ತು ಧರ್ಮಸ್ಥಳ ಸಂಘದ ಸಮನ್ವಯ ಅಧಿಕಾರಿಯಾದ ಮಂಜುಳಾ ಮತ್ತು ಸುನಿತಾರವರು ಪ್ರವಾಸ ಕುರಿತು ಅಗ್ನಿಶಾಮಕ ಠಾಣೆ ಪೊಲೀಸ್ ಠಾಣೆ ನಂತರ ಶ್ರೀ ಕ್ಷೇತ್ರ ಕೊಟ್ಟೂರೇಶ್ವರ ದೇವಸ್ಥಾನದ ದರ್ಶನ ಪಡೆದೆವು ಎಂದು ತಿಳಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು**

# ಈ ದೇಶದ ಸಂಸ್ಕೃತಿ ಉಳಿದಿರುವುದು ಹಳ್ಳಿಗಳಲ್ಲಿ: ಅಶೋಕ ಹಂಚಲಿ



**ಬಾಗಲಕೋಟೆ :** ಮನಸ್ಸಿನ ಹೊಲಸನ್ನು ಶುದ್ಧ ಆಗ ಬೇಕಾದರೆ ಆಧ್ಯಾತ್ಮಿ ಚಿಂತನೆ, ದೇವಸ್ಥಾನದಲ್ಲಿ ಬಾರಿಸುವ ಗಂಟೆಗಳು,ಅವುಗಳೆಲ್ಲವೂ ಆಧ್ಯಾತ್ಮದಲ್ಲಿ ಉಳಿದು ಹೋಗಿ ಲೀನ ಆಗುತ್ತದೆಯೋ ಅಂತಹ ನೆಲಕ್ಕೆ ಬಂದಾಗ ಮಾತ್ರ ಮನಸ್ಸು ಸ್ವಚ್ಛ ಆಗುತ್ತದೆ ಎಂದು ಜಾನಪದ ಕವಿ ಅಶೋಕ ಹಂಚಲಿ ಹೇಳಿದರು.

ಬೀಳಗಿ ತಾಲೂಕಿನ ಹೊಸ ರೊಳ್ಳಿ ಗ್ರಾಮದಲ್ಲಿ ಮಹಾಗಣಪತಿ ದೈವ ಮಂಡಳಿ ಹಾಗೂ ಭಾರತೀಯ ಕಿಸಾನ್ ಸಂಘ ಉತ್ತರ ಪ್ರಾಂತ ಜಿಲ್ಲಾ ಘಟಕ ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಗಜಾನನೋತ್ಸವ ಹಾಗೂ ಬಲರಾಮ ಜಯಂತಿ ಹಾಗೂ ಜನಪದ ಸಂಭ್ರಮ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಉಪನ್ಯಾಸ ಮಾಡಿದ ಅವರು,ಗಣೇಶನ ಪ್ರತಿಷ್ಠಾಪನೆ ಜೋತೆಗೆ ಈ ಗ್ರಾಮದಲ್ಲಿ ದಾಸೋಹ,ಶಿವ ಚಿಂತನೆ,ಶಿವ ಧ್ಯಾನ,ಆಧ್ಯಾತ್ಮದ ಚಿಂತನೆ ನಡೆಯುತ್ತಿದೆ,ಇದು ಭಾರತ ಸನಾತನ ಧರ್ಮದ ಪರಂಪರೆಯನ್ನ ಮುಂದುವರಿಸಿಕೊಂಡು ಹೋಗುವ ಗ್ರಾಮ,ಇತ್ತೀಚಿನ ದಿನಗಳಲ್ಲಿ ಭಜನಾ,ಗೀಗಿ ಪದ,ಲಾವಣಿ ಗೀತೆ,ತತ್ವಪದ,ಸಂಪ್ರದಾಯ ಪದ,ಬಿಸುಕಲ ಪದ,ಸೋಬಾನ ಪದ,ಏಕತಾರಿ,ಲಾಲಿ ಹಾಡು,ಬೀಸುವಾಗ ಹಾಡು,ಹಂತಿ ಹಾಡು,ಎಲ್ಲವೂ ಮರೆಯಾಗುತ್ತಿವೆ,ಎಂದು ಜನಪದ ಹಾಡಿನ ಮೂಲಕ ಹೇಳಿದರು. ಬಳಿಕ ಪಾರಂಪರಿಕ ವೈದ್ಯ ಹನಮಂತ ಮಳಲಿ ಮಾತನಾಡಿ ಗೋವು ಆಮ್ಲಜನಕವನ್ನು ತೆಗಿದುಕೊಂಡು ಆಮ್ಲಜನಕವನ್ನೇ ಹೊರಗಡೆ ಬಿಡುವಂತ ಜಗತ್ತಿನ ಎಕೈಕ ಜೀವಿ,ಮನೆಗೊಂದು ಜವಾರಿ ಆಕಳು ಸಾಕಿ,ಉತ್ತಮ ಆರೋಗ್ಯಕ್ಕೆ ದೇಸಿ ಜವಾರಿ ಆಕಳು ಯೋಗ್ಯ ಹೊರತು ವಿದೇಶಿ ಆಕಳು ಅಲ್ಲ,ದೇಸಿ ಗೋವು ಆದಾರಿತ ಕೃಷಿ ಇರೊವರೆಗೂ ಯಾವನೊಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿಲ್ಲ, ಯಂತ್ರೋಪಕರಣಗಳು ಬಂದಾಗಿನಿಂದ ರೈತನ ಸಾವು ಪ್ರಾರಂಭವಾದವು, ಭೂಮಿಗೆ ರಾಸಾಯನಿಕ ವಿಷಪೂರಿತ ಗೊಬ್ಬರ ಸಿಂಪಡಣೆ ಮಾಡಿದರೆ ಆರೋಗ್ಯಕರ ಬದುಕು ಹೇಗೆ ಸಿಗಲು ಸಾಧ್ಯ..? ನಮ್ಮ ಆರೋಗ್ಯ ನಮ್ಮ ಅಡುಗೆ ಮನೆಯಲ್ಲೇ ಇದೆ ಅಡುಗೆ ಮನೆಯಲ್ಲಿ ಆರು ರಸಗಳಿವೆ, ಅವುಗಳನ್ನ ಸರಿಯಾಗಿ ಬಳಕೆ ಮಾಡಿದರೆ 16 ರೋಗಳು ಮನುಷ್ಯ ಹತ್ತಿರ ಸುಳಿಯಲ್ಲ ಎಂದ ಅವರು ನೆರೆದಿದ್ದ ಜನರಿಗೆ ಮನ ಮುಟ್ಟುವಂತೆ ಉಪನ್ಯಾಸ ನೀಡಿದರು.ಈ ಸಂರ್ಭದಲ್ಲಿ ಬಾಗಲಕೋಟೆ ಆಯುರ್ವೇದಕ ವೈದ್ಯ ಡಾ. ಶಿವಾನಂದ ಗುರೂಜಿ, ಸುಬ್ಬರಾಯಗೌಡ ಪಾಟೀಲ, ವಿರೂಪಾಕ್ಷಯ್ಯ ಹಿರೇಮಠ,ಕಾವ್ಯಾ ಪಾಟೀಲ,ಬಿ.ಎಮ್.ಕುಬಕಡ್ಡಿ,ಸುರೇಶ ಬಿರಾದಾರ,ಗೋವಿಂದಪ್ಪ ಬಿಳಂಡಿ,ಶಿವಪ್ಪ ನಾಯ್ಕರ,ಗುರು ಅನಗವಾಡಿ, ಎಸ್.ಎನ್.ಮುತ್ತಗಿ, ಪ್ರಕಾಶ ಚಿನವಾಲ,ಎಂ.ವಾಯ್. ವಡವಾಣಿ,ನಿಂಗಪ್ಪ ನಿಂಗನೂರ ಮತ್ತಿತರರು ಇದ್ದರು.

> **6** ಈಗಿನ ಬದುಕು ಜನಪದದಲ್ಲಿ ಅಡಗಿದೆ,ಈಗಿನ ಜನರಿಗೆ ಜಾನಪದದ ಅರಿವು ಮೂಡಿಸಬೇಕಾಗಿದೆ,ಮನುಷ್ಯ ಜನಪದ ಶೈಲಿಯಲ್ಲಿ ಬದುಕಿದರೆ ಮಾತ್ರ ತನ್ನ ಆಯುಷ್ಯವನ್ನು ಪೂರ್ಣಗೊಳಿಸಾಲು ಸಾಧ್ಯ,ಡೋಳ್ಳು ಕುಣಿತ,ಕರಡಿಮಜಲುಗಳು ದೇಹವನ್ನ ಬಲಾಢ್ಯಗೊಳಿಸಿ ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುತ್ತವೆ.
> । ಪವಿತ್ರಾ ಜಕ್ಕಪ್ಪನವರ ನಟಿ

# ನಮಗೆ ದೊರಕಿದ ಹುದ್ದೆಗೆ ನ್ಯಾಯ ಒದಗಿಸಿದರೆ ಖಂಡಿತ ಯಶಸ್ಸು: ಶಂಕರ ಬೆಳ್ಳುಬ್ಬಿ



**ಬಸವನಬಾಗೇವಾಡಿ :** ಭಗವಂತ ನಮಗೆ ನೀಡಿದ ಹುದ್ದೆಯಲ್ಲಿ ಯಾವುದೇ ಮುಖವಾಡ ಧರಿಸದೇ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವ ಮೂಲಕ ಆ ಹುದ್ದೆಗೆ ನ್ಯಾಯ ಒದಗಿಸಿದರೆ ಅದರಲ್ಲಿ ನಾವು ಖಂಡಿತ ಯಶಸ್ಸು ಸಾಧಿಸಬಹುದು ಎಂದು ಧಾರವಾಡ ವಾಣಿಜ್ಯ ತೆರಿಗೆ ಇಲಾಖೆಯ ಉಪಆಯುಕ್ತ ಶಂಕರ ಬೆಳ್ಳುಬ್ಬಿ ಹೇಳಿದರು.

ಪಟ್ಟಣದ ಬಸವ ಭವನದಲ್ಲಿ ತಾಲೂಕಾಡಳಿತ, ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಗುರುವಾರ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರ ಸನ್ಮಾನ ಸಮಾರಂಭದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ನಾವು ಯಾವುದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದರೂ ಆ ಹುದ್ದೆಗೆ ಮೋಸವಾಗದಂತೆ ಕಾರ್ಯ ಮಾಡುವುದು ಬಹು ಮುಖ್ಯ. ಶಿಕ್ಷಕ ಬಾಂಧವರ ಮೇಲೆ ಸಮಾಜದ ನಿರೀಕ್ಷೆ ಬಹಳಷ್ಟಿದೆ. ಶಿಕ್ಷಕರಲ್ಲಿರುವ ಅದ್ಭುತ ಶಕ್ತಿಯಿಂದಾಗಿ ಮಕ್ಕಳು ರಾಷ್ಟ್ರಪತಿ, ಪ್ರಧಾನಿ ಹುದ್ದೆ, ಮುಖ್ಯಮಂತ್ರಿಹುದ್ದೆ ಸೇರಿದಂತೆಯಾವುದೇ ಹುದ್ದೆಗಳನ್ನು ಪಡೆದುಕೊಳ್ಳಬಹುದು. ಎಲ್ಲ ವೃತ್ತಿಗಿಂತಲೂ ಶಿಕ್ಷಕ ವೃತ್ತಿಯಲ್ಲಿ ಸಂತೃಪ್ತಿ ಸಿಗುತ್ತದೆ. ಶಿಕ್ಷಕರಿಗೆ ಸಮಾಜ ಸುಧಾರಣೆ ಮಾಡುವ ಶಕ್ತಿಯಿದೆ ಎಂದರು.

ಶಿಕ್ಷಕ-ಗುರು ಎಂಬುವದು ಬೇರೆ ಬೇರೆ-ಯಾಗಿದೆ. ಇಂದು ಶಿಕ್ಷಕರ ದಿನಾಚರಣೆವಿದೆ ಹೊರತು ಗುರು ದಿನಾಚರಣೆಯಲ್ಲಿ. ಸಂಬಳ ಪಡೆದು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವವರು ಶಿಕ್ಷಕರಾದರೆ, ಯಾವುದೇ ಫಲಾಪೇಕ್ಷೆಯಿಲ್ಲದೇ ಜ್ಞಾನ ನೀಡುವವರು ಗುರು ಆಗುತ್ತಾರೆ. ನಾನು 11 ವರ್ಷ ಕಾಲ ಶಿಕ್ಷಕನಾಗಿ ಸೇವೆ ಸಲ್ಲಿಸಿ ನನ್ನ ತಂದೆ-ತಾಯಿ, ನನಗೆ ಕಲಿಸಿದ ಶಿಕ್ಷಕರ, ನಾನು ಕಲಿಸಿದ ವಿದ್ಯಾರ್ಥಿಗಳ ಆಶೀರ್ವಾದದಿಂದ ಕೆಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಒಂದು ನಯಾಪೈಸೆ ಇಲ್ಲದೇ ಇಂದು ತಮ್ಮ ಮುಂದೆ ಅಧಿಕಾರಿಯಾಗಿ ಮಾತನಾಡುತ್ತಿದ್ದೇನೆ. ಕಳೆದ 7 ವರ್ಷದಿಂದ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರೂ ಶಿಕ್ಷಕ ವೃತ್ತಿಯಲ್ಲಿ ಸಿಗುತ್ತಿದ್ದ ಸಂತೃಪ್ತಿ ಇಲ್ಲಿ ಸಿಗುತ್ತಿಲ್ಲ. ನಾನು ಅಧಿಕಾರಿಯಾಗಿದ್ದರೂ ಶಿಕ್ಷಕ ವೃತ್ತಿ ಬಿಟ್ಟಿಲ್ಲ. ನಾನು ರಜೆ ಬಂದರೆ ಸಾಕು ಶಾಲಾ-ಕಾಲೇಜುಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತೇನೆ. ಇದುವರೆಗೂ 5 ಲಕ್ಷ ವಿದ್ಯಾರ್ಥಿಗಳು ನನ್ನಿಂದ ಮಾರ್ಗದರ್ಶನ ಪಡೆದುಕೊಂಡಿದ್ದಾರೆ. ಇದರಲ್ಲಿ 200 ಕೆಎಎಸ್, 500-600 ವಿದ್ಯಾರ್ಥಿಗಳು ಪಿಎಸೈ ಹುದ್ದೆಗೆ ನೇಮಕವಾಗಿದ್ದಾರೆ. ನನಗೆ ಕಲಿಸಿದ ಶಿಕ್ಷಕರಿಂದ ಇದೆಲ್ಲವೂ ಸಾಧ್ಯವಾಗಿದೆ ಎಂದರೆ ತಪ್ಪಾಗಲಾರದು. ಶಿಕ್ಷಕರು ಕೇವಲ ಬಿಲ್-ಬೆಲ್ಲಾಗಿ ಕಾರ್ಯನಿರ್ವಹಿಸುವಂತಾಗಬಾರದು. ಮಕ್ಕಳ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವಂತಾಗಬೇಕೆಂದರು.

ತಹಸೀಲ್ದಾರ ವೈ.ಎಸ್.ಸೋಮನಕಟ್ಟಿ ಮಾತನಾಡಿ,ನಾನು 7ವರ್ಷ ಕಾಲ ಶಿಕ್ಷಕನಾಗಿ ಕಾರ್ಯನಿರ್ವಹಿಸಿದ್ದೇನೆ. ದೇಶದ ಭವಿಷ್ಯ ರೂಪಿಸುವ ಜವಾಬ್ದಾರಿ ಶಿಕ್ಷಕ ಬಾಂಧವರ ಮೇಲಿದೆ. ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಕ್ಕರೆ ಅವರು ಸತ್ಪ್ರಜೆಗಳಾಗಿ ಹೊರಹೊಮ್ಮುತ್ತಾರೆ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರ ಅಭಿವೃದ್ಧಿಗೆ ಶಿಕ್ಷಕರು ಶ್ರಮಿಸಬೇಕೆಂದರು.

ಸಾನಿಧ್ಯ ವಹಿಸಿದ್ದ ಹಿರೇಮಠದ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಶಿಕ್ಷಕರ ಮೇಲೆ ಇರುವ ಗೌರವ ದೊಡ್ಡದ್ದು. ನಮ್ಮನ್ನು ಸೇರಿದಂತೆ ಎಲ್ಲರೂ ಶಿಕ್ಷಕರು ಕಲಿಸಿದ ಅಕ್ಷರದಿಂದಲೇ ಜೀವನದಲ್ಲಿ ದೊಡ್ಡವರಾಗಿದ್ದಾರೆ. ಸ್ವಾರ್ಥರಹಿತ ಶಿಕ್ಷಣ ನೀಡಬೇಕು. ಜ್ಞಾನವನ್ನು ಹೆಚ್ಚಾಗುವ ರೀತಿಯಲ್ಲಿ ಶಿಕ್ಷಕರು ಸೇವೆ ಸಲ್ಲಿಸುವಂತಾಗಬೇಕು.

ಇಂದು ಎಲ್ಲೆಡೆ ಖಾಸಗಿ ಶಾಲೆಗಳ ಪ್ರಭಾವ ಕಾಣುತ್ತೇವೆ. ಸರ್ಕಾರಿ ಶಾಲೆಯಲ್ಲಿರುವ ಶಿಕ್ಷಕರು ಉತ್ತಮ ಶಿಕ್ಷಣ ನೀಡುವ ಮೂಲಕ ಖಾಸಗಿ ಶಾಲೆಗಳ ಪ್ರಭಾವ ಕಡಿಮೆಯಾಗಿ ಸರ್ಕಾರಿ ಶಾಲೆಗಳ ಪ್ರಭಾವ ಹೆಚ್ಚಾಗುವಂತೆ ಸಂಕಲ್ಪ ಮಾಡಿ ಕಾರ್ಯನಿರ್ವಹಿಸುವಂತಾಗಬೇಕೆಂದರು.

ಸಾನಿಧ್ಯ ವಹಿಸಿದ್ದ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ, ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಬಿಇಓ ವಸಂತ ರಾಠೋಡ, ಕರವೇ ಮುಖಂಡ ಅಶೋಕ ಹಾರಿವಾಳ ಮಾತನಾಡಿದರು.

ವೇದಿಕೆಯಲ್ಲಿ ಇಟಗಿಯ ಗುರುಶಾಂತವೀರ ಶಿವಾಚಾರ್ಯ ಸ್ವಾಮೀಜಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ನ್ಯಾಯವಾದಿ ಬಿ.ಕೆ.ಕಲ್ಲೂರ, ಧುರೀಣರಾದ ಶಿವನಗೌಡ ಬಿರಾದಾರ, ಸಂಗಮೇಶ ಓಲೇಕಾರ, ನೀಲು ನಾಯಕ, ತಾಪಂ ಇಓ ಪ್ರಕಾಶ ದೇಸಾಯಿ, ಅಕ್ಷರ ದಾಸೋಹದ ಅಧಿಕಾರಿ ಎಸ್.ಎಚ್.ಬಿರಾದಾರ, ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಎಸ್.ಅವಟಿ,ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಮಂಗಾನವರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಬಿ.ಪಿ.ನಾಗಾವಿ ಇತರರು ಇದ್ದರು. ಕ್ಷೇತ್ರ ಸಮನ್ವಯಾಧಿಕಾರಿ ಸುನೀಲ ನಾಯಕ ಸ್ವಾಗತಿಸಿದರು. ಎಸ್.ಎಸ್.ಅಂಬಲಿ, ಭಾರತಿ ಪಾಟೀಲ, ಮಹೇಶ ಪೂಜಾರಿ ನಿರೂಪಿಸಿದರು. ಶರಣು ದಳವಾಯಿವಂದಿಸಿದರು.ಕಾರ್ಯಕ್ರಮಕ್ಕೂ ಮುನ್ನ ಡಾ.ಸರ್ವಪಲ್ಲಿ ರಾಧಾಕೃಷ್ಣನ್, ಜ್ಯೋತಿಬಾ ಫುಲೆ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಯಿತು. ನಂತರ ಅಖಂಡ ತಾಲೂಕಿನಲ್ಲಿ ನಿವೃತ್ತಗೊಂಡ ಶಿಕ್ಷಕರನ್ನು, ಸಮಾರಂಭಕ್ಕೆ ಸಹಾಯ-ಸಹಕಾರ ನೀಡಿದ ಮಹನೀಯರನ್ನು ಸನ್ಮಾನಿಸಲಾಯಿತು. ಇಂದು ಉಪನ್ಯಾಸ ನೀಡಿದ ಕೆಎಎಸ್ ಅಧಿಕಾರಿ ಶಂಕರ ಬೆಳ್ಳುಬ್ಬಿ ಅವರು ತಮಗೆ ಕಲಿಸಿದ ಗುರುಗಳಿಗೆ ವೇದಿಕೆಯ ಮೇಲೆ ಸನ್ಮಾನಿಸಿ ಅವರಿಗೆ ನಮಸ್ಕರಿಸುವ ಮೂಲಕ ಗುರು ನಮನ ಸಲ್ಲಿಸಿದ್ದು ಹೃದಯಸ್ಪರ್ಶಿಯಾಗಿತ್ತು.

# ಮಕ್ಕಳ ದಿನಾಚರಣೆ: ವಿವಿಧ ಪ್ರಶಸ್ತಿಗಳಿಗಾಗಿ ನಾಮ ನಿರ್ದೇಶನಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ ಹಾಗೂ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿಗಾಗಿ ನಾಮ ನಿರ್ದೇಶನಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಸಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಮಕ್ಕಳ ದಿನಾಚರಣೆ-2024ರ ಪ್ರಯುಕ್ತ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯ ಸಾಹಸ ಪ್ರದರ್ಶಿಸಿದ 6 ರಿಂದ 18 ವರ್ಷದೊಳಗಿನ ಬಾಲಕರಿಗೆ "ಹೊಯ್ಸಳ" ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ" ಶೌರ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿರುತ್ತದೆ. ಈ ಪ್ರಕರಣವು 01.08.2023 ರಿಂದ 31.07.2024 ರೊಳಗೆ ನಡೆದಿರಬೇಕು. ದಿನಾಂಕ: 01.08.2006 ರಂದು ಹಾಗೂ ನಂತರ ಜನಿಸಿದ ಮಕ್ಕಳು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ ರೂ. 10,000 ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಸಿಗಲಿದೆ. ಇದೇ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ಪ್ರಶಸ್ತಿ ಪತ್ರದೊಂದಿಗೆ ತಲಾ ರೂ.25,000 ನಗದು ಬಹುಮಾನ ಮತ್ತು ಸಂಸ್ಥೆಗಳಿಗೆ ಪ್ರಶಸ್ತಿ ಪತ್ರದೊಂದಿಗೆ ತಲಾ ರೂ.1,00,000 ಗಳ ನಗದು ಬಹುಮಾನ ನೀಡಿ ಗೌರವಿಸಲಾಗುವುದು.

ಮಕ್ಕಳ ದಿನಾಚರಣೆ-2024ರ ಸಾಲಿನ ಪ್ರಶಸ್ತಿಗಾಗಿ ನಿಗದಿಪಡಿಸಿರುವ ಅರ್ಜಿ ನಮೂನೆಯನ್ನು ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಪ್ಪಳ ಇವರಿಂದ ಪಡೆದು ಕನ್ನಡ ಭಾಷೆಯಲ್ಲಿ ಭರ್ತಿ ಮಾಡಿ, ಭರ್ತಿ ಮಾಡಿದ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಸೆಪ್ಟೆಂಬರ್ 18ರೊಳಗೆ ಸಲ್ಲಿಸಬೇಕು. ನಿಗದಿತ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ಕನ್ನಡ ಭಾಷೆಯಲ್ಲಿ ಸಲ್ಲಿಸಬೇಕು ಎಂದು ಕೊಪ್ಪಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿವಬೋಧರಂಗ ಅರ್ಬನ್ ಸೊಸಾಯಿಟಿಗೆ ರೂ. 5.70 ಕೋಟಿ ಲಾಭ



**ಮೂಡಲಗಿ :** ನಮ್ಮ ಶಿವಬೋಧರಂಗ ಅರ್ಬನ್ ಕೋ ಆಫ್ ಕ್ರೆಡಿಟ್ ಸೊಸಾಯಟಿಯು ಕಳೆದ ಮಾರ್ಚ ಅಂತ್ಯಕ್ಕೆ 5.70 ಕೋಟಿ ರೂ ಲಾಭಗಳಿಸಿ ಎಂದು ಸೊಸಾಯಟಿಯ ಅಧ್ಯಕ್ಷ ಬಸವರಾಜ ಗುಲಗಾಜಂಬಗಿ ಹೇಳಿದರು.

ಸೋಮವಾರ ಕೆ ಎಚ್ ಸೋಣವಾಲ್ಕ ಕಲ್ಯಾಣ ಮಂಟಪ್ಪದಲ್ಲಿ ಜರುಗಿದ ಶ್ರೀ ಶಿವಬೋಧರಂಗ ಅರ್ಬನ್ ಕೋ ಆಪ್ ಕ್ರೆಡಿಟ್ ಸೊಸಾಯಿಟಿಯು 29ನೇ ವಾರ್ಷಿಕ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು,

ಸಂಘದ ಉಪಾಧ್ಯಕ್ಷ ಸುಭಾಸ ಸೋನವಾಲ್ಕರ, ಮಾತನಾಡಿ, ಸಹಕಾರ ಸಂಸ್ಥೆಯು ಇಷ್ಟು ಎತ್ತರಕ್ಕೆ ಬೆಳೆಯಲು ಶೇರುದಾರರು ಠೇವಣಿದಾರರ ಸಹಕಾರ ಬಹಳ ಮುಖ್ಯವಾಗಿದೆ ಸಂಘವು ಮಾರ್ಚ ಅಂತ್ಯಕ್ಕೆ ಶೇರು ಬಂಡವಾಳ 5.71 ಕೋಟಿ, 26.41 ಕೋಟಿ ನಿಧಿಗಳು, ಠೇವುಗಳು 341.48 ಹೊಂದಿ, ಗುಂತಾವಣಿ 110.36 ಕೋಟಿ ಹೊಂದಿ, 191.49 ಕೋಟಿ ಸಾಲವಿತರಣೆ ಮಾಡಿ.3903 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು 1335 ಕೋಟಿ ರೂ ಕ್ಕಿಂತ ಅಧಿಕ ವಹಿವಾಟು ನಡೆಸಿ ಮಾರ್ಚ ಅಂತ್ಯಕ್ಕೆ 5.70 ಲಾಭಗಳಿದೆ ಎಂದರು,

ಸಲಹಾ ಸಮಿತಿಯ ಸದಸ್ಯರಾದ ಮಹಾದೇವ ಗಾಣಿಗಿ, ಶಿವಾನಂದ ದಾಶಾಳ ಮಾತನಾಡಿದರು, ವೇದಿಕೆಯ ಮೇಲೆ ನಿರ್ಧೇಶಕರಾದ ರವಿಂದ್ರ ಸೋನವಾಲ್ಕರ, ರೇವಪ್ಪ ಕುರಬಗಟ್ಟಿ, ಪುಲಕೇಶಿ ಸೋನವಾಲ್ಕರ ಅಶೋಕ ಹೂಸೂರ, ಡಾ ಶಂಕರ ಡಂಡಪ್ಪನ್ನವರ ಹನಮಂತ ಸಣ್ಣಕ್ಕಿ, ವಿಧ್ಯಾವತಿ ಸೋನವಾಲ್ಕರ, ಮಂಜುಳಾ ಬಳಿಗಾರ, ಗಂಗವ್ವಾ ಸಣ್ಣಪ್ಪನ್ನವರ, ಶಾಖಾ ಸಲಹಾ ಸಮಿತಿ ಸದಸ್ಯರು ಇದ್ದರು,

ಪ್ರಧಾನ ವವ್ಯಸ್ಥಾಪಕ ಸುರೇಶ ನಾಶಿ ಅಡಾವೆ ಮಂಡಿಸಿದರು, ವಿ ಎಚ್ ಬಾಲರಡ್ಡಿ ಸ್ವಾಗತಿಸಿ ನಿರೂಪಿಸಿ ವಂದಿಸಿದರು.

# ಜೀವನದಲ್ಲಿ ನೆಮ್ಮದಿಯಿಂದ ಬದುಕಬೇಕಾಗಿದೆ: ಜಾಲಿಬೆಂಚಿ



**ತಾಳಿಕೋಟೆ :** ಹಳ್ಳಿಗಳಲ್ಲಿ ಇರತಕ್ಕಂತಹ ನಡೆ-ನುಡಿಗಳು ಹಾಗೂ ಅಲ್ಲಿರತಕ್ಕಂತಹ ಚಿಂತನೆಗಳನ್ನು ಮರೆತಿದ್ದೇವೆ ಆದರೂ ಜಗತ್ತನ್ನು ತೂಗುವ ಶಕ್ತಿ ಮಹಿಳೆಯರ ಕೈಯಲ್ಲಿದೆ ಎಂಬುದನ್ನು ಎಲ್ಲರು ಅರ್ಥೈಸಿಕೊಂಡು ನಡೆಯಬೇಕಾಗಿದೆ ಎಂದು ಬೆಂಗಳೂರು ಕರ್ನಾಟಕ ಜನಪದ ಅಕಾಡೆಮಿಯ ನಿಕಟಪೂರ್ವ ಸದಸ್ಯರಾದ ಅಮರಯ್ಯ ಜಾಲಿಬೆಂಚಿ ಅವರು ನುಡಿ-ದರು.

ರವಿವಾರರಂದು ಸ್ಥಳೀಯ ಶ್ರೀ ಖಾಸ್ಗತೇಶ್ವರ ತರುಣ ಮಂಡಳಿ ವಿದ್ಯಾನಗರದಲ್ಲಿ 7ನೇ ವರ್ಷದ ಗಜಾನನ ಉತ್ಸವ ಅಂಗವಾಗಿ ಏರ್ಪಡಿಸಲಾದ "ಹಳ್ಳಿಯ ಸೊಗಡು" ಎಂಬ ಕಾರ್ಯಕ್ರಮದ ಅನಾವರಣ ಸಮಾರಂಭದಲ್ಲಿ ಮುಖ್ಯಥಿತಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ಮನೆ ದೇಶ ಸಂರಕ್ಷಣೆಯಲ್ಲಿರಬೇಕಾದರೆ ಮಹಿಳೇಯರ ಕೊರಳಲ್ಲಿಯ ತಾಳಿ ಹಾಗೂ ಹಣೆಯ ಮೇಲೆ ಕುಂಕುಮದ ಕಲೆ ಬೇಕೆ-ಂದರು. ಕೆಂಪಾದ ಕುಂಕುಮ ನೋಡಿದರೆ ಆತ್ಮೀಯ ತಾಯಿಯ ಭಾವನೆ ಹುಟ್ಟುತ್ತದೆ ಅಲ್ಲದೆ ಕ್ರೂರ ಮನುಷ್ಯ ಕೂಡ ಅದನ್ನು ನೋಡಿ ತಲೆಬಾಗಿಸುತ್ತಾನೆಂದರು. ಇಂದಿನ ದಿನಮಾನದಲ್ಲಿ ವಿದೇಶ ಸಂಸ್ಕೃತಿಗೆ ಒಳಪಟ್ಟು ಹಣೆಯಮೇಲೆ ಟಿಕಳಿ ಹಚ್ಚುವ ಕಾರ್ಯ ನಡೆದಿದೆ ಇದ-ರಿಂದ ನಮ್ಮ ದೇಶದ ಸಂಸ್ಕೃತಿ ಎಲ್ಲಿಗೆ ಹೊರಟಿದೆ ಎನ್ನುವುದನ್ನು ಅರಿತುಕೊಂಡು ನಡೆಯಬೇಕಾಗಿದೆ ಎಂದರು. ಹಳ್ಳಿಯ ಬದುಕನ್ನು ತೊರಿಸುವ ಕಾರ್ಯ ಮಾಡಿದ ವಿದ್ಯಾನಗರ ಬಡಾವಣೆಯ ಯುವಕರ ಕಾರ್ಯ ಮಹತ್ವದ್ದಾಗಿದೆ ಹಿಂದಿನ-ಇಂದಿನ ಇತಿಹಾಸ ಹೇಗಿತ್ತೆಂದು ಮಕ್ಕಳ ನದಿರಿಗೆ ತಂದು ಹಂಚಿತಿನ್ನುವ ಬದಕನ್ನು ಕಲಿಸುವ ಕಾರ್ಯ ಮಾಡಬೇಕೆಂದರು. ಇಂದಿನ ಸಮಾಜದಲ್ಲಿ ಸುಳ್ಳಿಗೆ ಬೋರ್ಡು ಇದೆ, ಸತ್ಯಕ್ಕೆ ಬದುಕಿಲ್ಲದಂತಾಗಿದ.? ಇಂದಿನ ಸ್ಥಿತಿ-ಗತಿ ಎಂದು ವಿಷಾದಿಸಿದ ಜಾಲಿಬೆಂಚಿ ಅವರು ಕೆಡಕಿನಿಂದ ಒಳಿತಾಗಲು ಸತ್ಸಂಗಗಳು ಆಧ್ಯಾತ್ಮ ಅಗತ್ಯವಾಗಿದೆ ಎಂದರು.ಇಂದಿನ ಹಳ್ಳಿಯ ಸೊಗಡು ಕಾರ್ಯಕ್ರಮ ಕುರಿತು ಸಂಘಟಿಕರು ಎಲ್ಲರಿಗೆ ಮನವರಿಕೆ ಮಾಡಲು ಹೊಸ ಪರಂಪರೆಗೆ ಗುರಿತಿಸಲು ಗಾಲಿಗಳು, ಬಿಸುಕಲ್ಲುಗಳು, ಕುಟ್ಟುವ ಪದಗಳು, ಲಾವಣಿ ಪದಗಳು ಇಂತಹದನ್ನು ಅರಿತು ಕೋಳ್ಳಲು ಅನುವು ಮಾಡಿ ಕೊಟ್ಟಿದ್ದಾರೆ ಲಾವಣಿ ಪದಗಳು ,ಗೀಗಿ ಪದಗಳು ಹಾಗೂ ಹಂತಿ ಪದಗಳ ಮೂಲಕ ಹಿಂದಿನ ಕಾಲದಲ್ಲಿ ಸ್ವಾತಂತ್ರ ?ಯ ದೊರಕಿಸಿ ಕೊಳ್ಳುವಲ್ಲಿ ಯಶಸ್ವಿಗೊಂಡಿದ್ದಾರೆ. ಸತ್ಯವಾದ ಬದುಕು ಹಳ್ಳಿಯದ್ದಾಗಿದೆ ಇದು ಸುಳ್ಳಿನ ಕತೆಯಲ್ಲವೆಂದರು.

ಇನ್ನೋರ್ವ ದಿವ್ಯ ಸಾನಿಧ್ಯವಹಿಸಿ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದ ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ಮಾತನಾಡಿ ಸರಳತೆ ಮತ್ತು ಸಂಸ್ಕೃತಿಯಿಂದ ಕೂಡಿದ ದೇಶ ಭಾರತ ದೇಶ ನಮ್ಮದಾಗಿದೆ ಹಳ್ಳಿಯಲ್ಲಿರತಕ್ಕಂತಹ ನಡೆತಕ್ಕಂತಹ ಬಿಸುವ ಹಾಗೂ ಕುಟ್ಟುವ ಕಾರ್ಯಗಳು ಇಂದಿನ ದಿನಮಾನಗಳಲ್ಲಿ ಕಣ್ಮರೆಯಾದಂತಾಗಿವೆ ಇಂತಹ ಕಾರ್ಯ ಮಾಡುವುದನ್ನುಬಿಟ್ಟರೆಮರೆತುಹೋಗುತ್ತವೆ ಎಂಬ ಉದ್ದೇಶದಿಂದ ವಿದ್ಯಾನಗರ ಬಡಾವಣೆಯ ಶ್ರೀ ಖಾಸ್ಗತೇಶ್ವರ ತರುಣ ಮಂಡಳಿಯವರುಇಂದುಹಳ್ಳಿಯಸೊಗಡು ಎಂಬ ಕಾರ್ಯಕ್ರಮವನ್ನು ಏರ್ಪಡಿಸಿ ಹಳ್ಳಿಗಳಲ್ಲಿಯ ಆರೋಗ್ಯಕರವಾದ ಕೆಲಸ ಕಾರ್ಯಗಳ ಕುರಿತು ಉದಾರಿಸಿದ ಶ್ರೀಗಳು ಇಂದಿನಇಲ್ಲಿಯಕಾರ್ಯಕ್ರಮಮಾದರಿಯ ಕಾರ್ಯಕ್ರಮವು ಅನ್ಯರಿಗೆ ಸುಧಾರಣೆ-ಯತ್ತ ಕೊಂಡೊಯ್ಯುವಂತಹ ಕಾರ್ಯವು ಇದರಲ್ಲಿ ಅಡಗಿದೆ ಎಂದು ಸಂಘಟಿಕರು ಮಾಡಿದಂತಹ ಹಾಗೂ ಪ್ರದರ್ಶನಕ್ಕೆ ಇಟ್ಟಂತಹ ಹಳ್ಳಿಯಲ್ಲಿ ಮನೆಗಳಲ್ಲಿ ಉಪಯೋಗಿಸುವಂತಹ ಸಲಕರಣೆಗಳ ಕುರಿತು ಬಿಡಿ-ಬಿಡಿಯಾಗಿ ಹೇಳಿ ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು ಕೇಲವು ಚಿಕ್ಕ ಕತೆಗಳನ್ನು ಹೇಳಿ ಉಪಸ್ಥಿತ ಜನಸ್ಥೋಮಕ್ಕೆ ಒಳ್ಳೆಯ ಮಾರ್ಗದತ್ತ ಕೊಂಡೊಯ್ಯುವ ಕಾರ್ಯ ಶ್ರೀಗಳು ಮಾಡಿದರಲ್ಲದೆ ಇಂತಹ ಕಾರ್ಯಕ್ರಮವನ್ನು ಮೇಲಿಂದ ಮೇಲೆ ಏರ್ಪಡಿಸಿ ಮಕ್ಕಳಿಗೂ ಕೂಡ ಜ್ಞಾನೋದಯ ಮಾಡಬೇಕೆಂದರು.

ಇನ್ನೋರ್ವ ಅಥಿತಿ ಬಾಲಭಾರತಿ ವಿದ್ಯಾಮಂದಿರದ ಶಿಕ್ಷಕ ಪ್ರಕಾಶ ಕಟ್ಟಿಮನಿ ಅವರುಮಾತನಾಡಿಹಳ್ಳಿಯಸೊಗಡುಎಂಬ ಕಾರ್ಯಕ್ರಮ ತರುಣ ಮಂಡಳಿಯವರು ಏರ್ಪಡಿಸಿದ್ದು ಸಂತಸ ತಂದಿದೆ ಇಂತಹ ಕಾರ್ಯಕ್ರಮ ಮೇಲಿಂದ ಮೇಲೆ ನಡೆದರೆ ಸನ್ಮಾರ್ಗದತ್ತ ಸಾಗಬಹುದಾಗಿದೆ ಎಂದರು. ವೇದಿಕೆಯ ಮೇಲೆ ರೈತರಾದ ಜಿ.ಜಿ ಯರನಾಳ ಹಾಗೂ ಸಾಹೇಬಗೌಡ ಯಾಳಗಿ ಅವರು ಉಪಸ್ಥಿತರಿದ್ದರು. ಇದೇ ಸಮಯದಲ್ಲಿ ಅಥಿತಿಯಳಿಗೆ ಹಾಗೂ ಶ್ರೀಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದನಂತರಸುಮಂಗಲೆಯರಿಗೆ ಉಡಿತುಂಬುವ ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮ ಸಂಘಟಿಸಿದ ವಿದ್ಯಾನಗರ ಬಡಾವಣೆಯ ಯುವಕ ಮಂಡಳಿಯವರಾದ ಸಂತೋಷ ಗಾವಡೆ, ಬಾಬೂ ಅಗಸರ, ಸಮರ್ಥ ಸಜ್ಜನ, ಈರಣ್ಣ ಬಡಿಗೇರ, ಸುನೀಲ ನಾಲತವಾಡ, ಅಕ್ಷಯ ನಾಲತವಾಡ ಮೊದಲಾದವರು ಉಪಸ್ಥಿತರಿದರು.

# ಲೋಕಾಯುಕ್ತ ಸಾರ್ವಜನಿಕ ಕುಂದುಕೊರತೆ ಸಭೆ ಹಾಗೂ ಅಹವಾಲು ಸ್ವೀಕಾರ

**ಬಾಗಲಕೋಟೆ :** ಜಿಲ್ಲೆಯ ಬೀಳಗಿ ಪಟ್ಟಣದ ತಹಶೀಲ್ದಾರ್ ಕಛೇರಿಯ ಸಭಾಭವನದಲ್ಲಿ ಲೋಕಾಯುಕ್ತ ಎಸ್ಪಿ ಸತೀಶ್ ಚಿಟ್ಟಗುಬ್ಬಿ ರವರ ನೇತೃತ್ವದಲ್ಲಿ ಸಾರ್ವಜನಿಕ ಕುಂದುಕೊರತೆ ಸಭೆ ಮತ್ತು ಅಹವಾಲು ಸ್ವೀಕಾರ ಸಭೆ ನಡೆಯಿತು.

ಸೋಮವಾರ ನಡೆದ ಸಭೆಯಲ್ಲಿ ಭಾರತೀಯ ಕಿಸಾನ್ ಸಂಘ ತಾಲೂಕಾ ಘಟಕ ದಿಂದ ಮನವಿ ಸಲ್ಲಿಸಿ,ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ಹೆಡ್ ಕ್ವಾಟರ ನಲ್ಲಿ ಇರಬೇಕು. ಅಧಿಕಾರಿಗಳು ಸಾರ್ವಜನಿಕರೊಂದಿಗೆ ಸೌಜನ್ಯ ಮತ್ತು ಸಹಕಾರ ದಿಂದ ವರ್ತಿಸಬೇಕು. ಆಡಳಿತ ಸೌಧದಲ್ಲಿ ಕುಡಿಯುವ ನೀರು ಮತ್ತು ಆಸನಗಳ ವ್ಯವಸ್ಥೆ ಕಲ್ಪಿಸಬೇಕು. ಕಂದಾಯ ಇಲಾಖೆಯಲ್ಲಿ ನಿಗಧಿ ಪಡಿಸಿದ ಶುಲ್ಕ ಗಿಂತ ಹೆಚ್ಚಿನ ಹಣ ವಸೂಲಿ ಹಾಗೂ ಸಮಯಕ್ಕೆ ಸರಿಯಾಗಿ ಕೆಲಸ ಮಾಡಿ ಕೊಡದೆ ವಿನಾಕಾರಣ ಅಲೆದಾಡಿಸುತ್ತಾರೆ ಅದಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸುಬ್ಬರಾಯ್ ಗೌಡ ಪಾಟೀಲ್ ಹಾಗೂ ಎಂ ವಾಯ್ ವಡವಾನಿ ಲೋಕಾಯುಕ್ತರಿಗೆ ಮನವಿ ಸಲ್ಲಿಸಿದರು.

ಕೊಪ್ಪ ಎಸ್ ಕೆ ಗ್ರಾಮದ ಶಂಕ್ರಪ್ಪ ಜೀರಗಾಳ ಅವರಿಗೆ ಪಿಡಿಓ ಈ ಸ್ವತ್ತು ಉತಾರ ಕೊಡಲು ವಿಳಂಬ,ಚಿಕ್ಕಾಲಗುಂಡಿ ಗ್ರಾಂ.ಪಂ ವ್ಯಾಪ್ತಿಯಲ್ಲಿ ಬರುವ ಕೊಪ್ಪ ಎಸ್ ಕೆ ಗ್ರಾಮದ ಸರ್ವೆ ನಂ :83/6 ರಲ್ಲಿ 9 ಗುಂಟೆ ಜಮೀನು ಹಾಗೂ ಸರ್ವೆ ನಂ 83/7 ರಲ್ಲಿ 03 ಗುಂಟೆ ಜಮೀನ ಒಟ್ಟು 12 ಗುಂಟೆ ಜಮೀನು.

ಎನ್ ಎ , ಕೆಜೆಪಿ ಮಾಡಿಸಿ ಈ ಸ್ವತ್ತು ಉತಾರ ಮಾಡಿಕೊಡಲು ದಿನಾಂಕ 31/03/2023 ರಂದು ಗ್ರಾಂ.ಪಂ.ಗೆ,ಅರ್ಜಿ ಸಲ್ಲಿಸಿ ಏಳು ತಿಂಗಳ ಕಳೆದರೂ ಪಿಡಿಓ ಕೆಲಸ ಮಾಡಿ ಕೊಡುತ್ತಿಲ್ಲ,ಎಂದು ಲೋಕಾಯುಕ್ತ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.ಒಟ್ಟು 09 ಅರ್ಜಿಗಳನ್ನು ಸ್ವಿಕರಿಸಿದ ಲೋಕಾಯುಕ್ತ ಅಧಿಕಾರಿಗಳು, ದೂರು ಅರ್ಜಿಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ.ನಿಗದಿತ ಸಮಯದಲ್ಲಿಅರ್ಜಿದಾರರಅಹವಾಲುಗಳನ್ನು ನಿಯಮಾನುಸಾರ ಇತ್ಯರ್ಥ ಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.ಬಳಿಕ ತಾಲೂಕಾಡಳಿತದಲ್ಲಿರುವ ವಿವಿಧ ಕಚೇರಿಗಳಿಗೆ ಭೇಟಿಹಾಗೂಕಚೇರಿಯಲ್ಲಿರುವಶೌಚಾಲಯದ ಸ್ವಚ್ಛತೆಯನ್ನು ಪರಿಶೀಲಿಸಿದರು,ಈ ಸಂದರ್ಭದಲ್ಲಿ ಡಿಸ್ಪಿ ಸಿದ್ದೇಶ್ವರ ಕೆ,ಸಿಪಿಐ ಬಸವರಾಜ್ ಮುಖರ್ತಿಹಾಳ,ಬಸವರಾಜ್ ಲಮಾಣಿ,ತಹಶೀಲ್ದಾರ್ ಸುಹಾಸ್ ಇಂಗಳೆ,ಉದಯ ಕುಂಬಾರ,ಇಓ ಅಭಯಕುಮಾರ್ ಮೊರಬ,ಸೇರಿ ಅನೇಕರು ಉಪಸ್ಥಿತರಿದ್ದ




ಕಸಬರಗಿ ಹಿಡಿದು ಪ್ರತಿಭಟನೆ

ನಿತ್ಯ ನೂರಾರು ಮಹಿಳೆಯರು ಹಳ್ಳಿಗಳಿಂದ ತಮ್ಮ ಕೆಲಸ ಕಾರ್ಯಗಳಿಗಾಗಿ, ತಹಶೀಲ್ದಾರ್,ಉಪ ನೊಂದಣಿ,ಸರ್ವೆ ಸೇರಿ ವಿವಿಧ ಕೆಲಸಕ್ಕೆಂದು ಕಚೇರಿಗೆ ಬರುವ ಮಹಿಳೆಯರಿಗೆ ಕಚೇರಿಯಲ್ಲಿ ಸರಿಯಾದ ಶೌಚಾಲಯದ ವ್ಯವಸ್ಥೆ ಇಲ್ಲ,ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಆಸನದ ವ್ಯವಸ್ಥೆ ಇಲ್ಲ. ಹೀಗಾಗಿ ಬಯಲು ಶೌಚಕ್ಕೆ ಹೋಗುವಂತ ಸ್ಥಿತಿ ನಿರ್ಮಾಣವಾಗಿದೆ.

ಕಚೇರಿಯು ಒಂದು ವಾರದಲ್ಲಿ ನಮ್ಮ ಮನವಿಗೆ ಸ್ಪಂದಿಸದಿದ್ದರೆ ಸ್ವಚ್ಛತೆಗಾಗಿ ನೂರಾರು ಮಹಿಳೆಯರು ಸೇರಿ ಕಸಬರಗಿ ಹಿಡಿದು ಪ್ರತಿಭಟನೆ ಮಾಡಲಾಗುವುದು. ಭಾರತೀಯ ಕಿಸಾನ್ ಸಂಘದ ಮಹಿಳಾ ಮುಖಂಡರಾದ ಕಾವ್ಯಾ ಪಾಟೀಲ ಹೇಳಿದರು.

# ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ

**ಧಾರವಾಡ :** ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಅಂಗವಾಗಿ ಧಾರವಾಡ ಡಿಮ್ಹಾನ್ಸ್‌ದಲ್ಲಿ ಖ್ಯಾತ ಮನೋವೈದ್ಯ ಪ್ರೊ?ರ. ಸಿ.ಆರ್.ಚಂದ್ರಶೇಖರ ಅವರಿಂದ ವಿಶೇಷ ಉಪನ್ಯಾಸ ಜರುಗಿತ್ತು.

ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ, ಧಾರವಾಡ, ಭಾರತೀಯ ಮನೋವೈದ್ಯಕೀಯ ಸಂಘ(ಕರ್ನಾಟಕ ಶಾಖೆ), ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ ಹುಬ್ಬಳ್ಳಿ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಧಾರವಾಡ, ಜನತಾ ಶಿಕ್ಷಣ ಸಮಿತಿ, ವಿದ್ಯಾಗಿರಿ ಧಾರವಾಡ, ಸೃಷ್ಟಿ ವಿಜ್ಞಾನ ಪದವಿ ಪೂರ್ವ ಕಾಲೇಜು ಧಾರವಾಡ, ಕೆ.ಇ.ಬೋರ್ಡ ಪದವಿ ಪೂರ್ವ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ, ಸ್ವಾಮಿವಿವೇಕಾನಂದ ಯೂತ್ ಮೂವಮೆಂಟ್, ಧಾರವಾಡ ಇವರ ಸಹಯೋಗದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಡಿಮ್ಹಾನ್ಸ್‌ನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಪ್ರೊ?ರ. ಸಿ.ಆರ್.ಚಂದ್ರಶೇಖರ ಅವರು ಮಾತನಾಡಿ, ಆತ್ಮಹತ್ಯೆ ತಡೆಗಟ್ಟುವ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ತುಂಬಾ ಮಹತ್ವ. ಆದ್ದರಿಂದ ಇಂತಹ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಮಾಡಬೇಕೆಂದು ಹೇಳಿದರು.

ಪಾಲಕರು ತಮ್ಮ ಮಕ್ಕಳ ಬಗ್ಗೆ ಜಾಗೃತಿ ವಹಿಸಬೇಕು. ಉತ್ತಮ ಹವ್ಯಾಸಗಳನ್ನು ರೂಪಿಸಿಕೊಳ್ಳಲು ಅವರಿಗೆ ಉತ್ತಮ ಮಾರ್ಗದರ್ಶನ ನೀಡಬೇಕು.



ಕುಟುಂಬದಲ್ಲಿ ಒಳ್ಳೆಯ ವಾತಾವರಣ ಇರುವಂತೆ ನೋಡಿಕೊಳ್ಳಬೇಕು. ಕೌಟಂಬಿಕ ಸಮಸ್ಯೆಗಳು, ಆರೋಗ್ಯ ಸಮಸ್ಯೆಗಳು, ಸೋಲುಗಳು, ಹತಾಶೆ, ಹಣಕಾಸಿನ ಸಮಸ್ಯೆಗಳು ಆತ್ಮಹತ್ಯೆಗೆ ಕಾರಣಗಳಾಗಿವೆ ಎಂದು ಅವರು ತಿಳಿಸಿದರು.

ಆತ್ಮಹತ್ಯೆ ತಡೆಗಟ್ಟಬಹುದಾದ ವಿಷಯ. ಸರಿಯಾದ ಕಾರಣಗಳನ್ನು ತಿಳಿದುಕೊಂಡು, ಆತ್ಮಹತ್ಯೆ ಮಾಡಿಕೊಳ್ಳಲು ಮನಸ್ಸು ಮಾಡಿರುವ ವ್ಯಕ್ತಿಗಳಿಗೆ ಅಗತ್ಯ ಆಪ್ತ ಸಮಾಲೋಚನೆ, ಸಹಾಯ ಮಾಡಬೇಕೆಂದು ಅವರು ಹೇಳಿದರು.

ಕೆಲವರು ತಮಗೆ ಅತಿಯಾದ ಕಷ್ಟಗಳು ಬಂದಾಗ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಅತಿ ಪುರಾತನ ಕಾಲದಿಂದಲೂ ಆತ್ಮಹತ್ಯೆ ಇದೆ, ಭೂ ಪ್ರವೇಶ, ಅಗ್ನಿ ಪ್ರವೇಶ, ಜಲಪ್ರವೇಶ ಹಿಗೇ ಇತರ ಆಯಾಮಗಳಲ್ಲಿ ಪುರಾತನ ಕಾಲದಲ್ಲಿ ಪ್ರಾಣತ್ಯಾಗ ಮಾಡುತ್ತಿದ್ದರು.

ಆತ್ಮಹತ್ಯೆ ತಡೆಗಟ್ಟಲು ಎಲ್ಲರ ಸಹಕಾರ ಅಗತ್ಯವೆಂದು ಅವರು ಅಭಿಪ್ರಾಯ ಪಟ್ಟರು.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿ, ಯುವ ಸಮೂಹದಲ್ಲಿ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ. ಮನೋವೈದ್ಯರ ಸಲಹೆ ಮತ್ತು ಮಾರ್ಗದರ್ಶನ ಪಡೆದು- ಕೊಂಡು ಆತ್ಮಹತ್ಯೆ ಯೋಚನೆಗಳಿಂದ ಹೊರಬರಬೇಕು ಮತ್ತು ಆತ್ಮವಿಶ್ವಾಸದಿಂದ ಬದುಕಿನಲ್ಲಿ ಸಾಧನೆ ಮಾಡಬೇಕು. ಆತ್ಮಹತ್ಯೆ ತಡೆಗಟ್ಟಲು ಎಲ್ಲರ ಸಹಕಾರಬೇಕು. ನಿರ್ಲಕ್ಷ್ಯವಹಿಸದೆ ಆತ್ಮಹತ್ಯೆ ಘಟನೆಗಳನ್ನು ತಡೆಗಟ್ಟಲು ಎಲ್ಲರೂ ಮುಂದಾಗಬೇಕೆಂದು ಅವರು ಹೇಳಿದರು.

ವೈದ್ಯಕೀಯ ಮತ್ತು ಅರೆವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಆತ್ಮಹತ್ಯೆ ಘಟನೆಗಳು ಹೆಚ್ಚಾಗದಂತೆ ಎಚ್ಚರವಹಿಸಬೇಕಾಗಿದೆಯೆಂದು ಡಾ. ಸಿ.ಆರ್.ಚಂದ್ರಶೇಖರ ಅವರು ಸಲಹೆ ನೀಡಿದರು.

ಆತ್ಮಹತ್ಯೆ ತಡೆಗಟ್ಟುವ ಕುರಿತು ವಿದ್ಯಾರ್ಥಿಗಳಿಗೆ ಪೋಸ್ಟರ್ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ಸಮಾರಂಭದಲ್ಲಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಭಾರತೀಯ ಮನೋವೈದ್ಯಕೀಯ ಸಂಘದ ಕರ್ನಾಟಕ ಶಾಖೆಯ ನೂತನ ಅಧ್ಯಕ್ಷ, ಜಿಮ್ಸ್ ಮನೋವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ.ಸೋಮಶೇಖರ ಬಿಜ್ಜಳ, ಡಿಮ್ಹಾನ್ಸ್‌ನ ನಿರ್ದೇಶಕ ಡಾ. ಅರುಣಕುಮಾರ ಸಿ, ಎಸ್.ವಿ.ವಾಯ್.ಸಂಸ್ಥೆಯ ನಿರ್ವಹಣಾ ಮಂಡಳಿಯ ನಿರ್ದೇಶಕ ಡಾ.ವಿ.ಎಮ್. ದೇಶಪಾಂಡೆ, ಡಿಮ್ಹಾನ್ಸ್ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ರಾಘವೇಂದ್ರ ನಾಯಕ್, ಡಿಮ್ಹಾನ್ಸ್‌ನ ಶುಶ್ರೂ?ಾಧಿಕಾರಿ ಲವ್ಹಲಿ ಮಾಥ್ಯೂಸ್, ಮನೋವೈದ್ಯ ಡಾ.ಆನಂದ ಪಾಂಡುರಂಗಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಡಾ.ಶ್ರೀಧರ ಕುಲಕರ್ಣಿ ಪ್ರಾರ್ಥಿಸಿದರು. ಮನೋವೈದ್ಯಕೀಯ ಪ್ರಾಧ್ಯಾಪಕ ಡಾ.ರಂಗನಾಥ ಕುಲಕರ್ಣಿ ಅತಿಥಿ ಪರಿಚಯ ಮಾಡಿದರು. ಪ್ರಶಾಂತ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಅಶೋಕ ಕೋರಿ ವಂದಿಸಿದರು.

ಡಿಮ್ಹಾನ್ಸ್ ಸಂಸ್ಥೆಯ ವಿವಿಧ ವಿಭಾಗದ ಬೋಧಕ ಹಾಗೂ ಬೋದ- ಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ವಾಲ್ಮಿಗೆ ಅಂತರಾಷ್ಟ್ರೀಯ ಮಂಡಳಿಯಿಂದ ವಾಟ್ಸೇವ್ ಪ್ರಶಸ್ತಿ



**ಧಾರವಾಡ :** ಅಂತರರಾಷ್ಟ್ರೀಯ ನೀರಾವರಿ ಮತ್ತು ಒಳಚರಂಡಿ ಮಂಡಳಿ (ಐಸಿಐಡಿ) ನೀರಾವರಿ ನಿರ್ವಹಣೆ, ಪ್ರವಾಹ ನಿರ್ವಹಣೆ ಮತ್ತು ಸುಸ್ಥಿರ ಕೃಷಿ ಉತ್ತೇಜಿಸಲು ವೈಜ್ಞಾನಿಕ ಹಾಗೂ ತಾಂತ್ರಿಕ ಜಾಗೃತಿ ಮೂಡಿಸುವ ಜಾಗತಿಕ ಮಟ್ಟದ ಸಂಸ್ಥೆಯಾಗಿದೆ ಎಂದು ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆಯ (ವಾಲ್ಮಿ) ನಿರ್ದೇಶಕ ಡಾ. ರಾಜೇಂದ್ರ ಪೋದ್ದಾರ ಅವರು ಹೇಳಿದರು.

ಅವರು ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ) ಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ಅಂತರರಾಷ್ಟ್ರೀಯ ವೇದಿಕೆಯಲ್ಲಿ ವಿವಿಧ ವಿಭಾಗಗಳ ತಜ್ಞರನ್ನು ಐಸಿಐಡಿ ಒಗ್ಗೂಡಿಸುತ್ತದೆ.

ಪ್ರಸ್ತುತ, ಐಸಿಐಡಿ ಸದಸ್ಯತ್ವ ಜಾಲವು ಪ್ರಪಂಚದ ನೀರಾವರಿ ಪ್ರದೇಶದ ಶೇ. 90 ಕ್ಕಿಂತ ಹೆಚ್ಚು ಆವರಿಸಿದೆ. ಆಫ್ರಿಕಾ, ಏ?ಾ?ಯ, ಅಮೇರಿಕಾ ಮತ್ತು ಯುರೋಪ್ ಪ್ರತಿನಿಧಿಸುವ ಪ್ರಾದೇಶಿಕ ಗುಂಪುಗಳು ನಿರ್ದಿಷ್ಟ ಪ್ರದೇಶಗಳಿಗೆ ಸಂಬಂಧಿಸಿದ ಚಟುವಟಿಕೆಯನ್ನು ಕೈಗೊಳ್ಳಲು ಟಾಸ್ಕ್ ಪೋರ್ಸ್ ಕಾರ್ಯನಿರ್ವಹಿಸುತ್ತವೆ ಎಂದು ಅವರು ತಿಳಿಸಿದರು.

ವಿಶ್ವ ನೀರಾವರಿ ವೇದಿಕೆಯಲ್ಲಿ ಜಾಗತಿಕ, ಪ್ರಾದೇಶಿಕ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಚರ್ಚಿಸಲು ಪ್ರಾದೇಶಿಕ ಸಮ್ಮೇಳನಗಳು, ಮಹಾ ಅಧಿವೇಶನ, ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಅಂತರರಾಷ್ಟ್ರೀಯ ಸಹಕಾರಕ್ಕಾಗಿ ತ್ರೈವಾರ್ಷಿಕ ಕಾಂಗ್ರೆಸ್‌ನಲ್ಲಿ ಜಾಗತಿಕ ತಜ್ಞರ ಉಪನ್ಯಾಸ, ಕೃಷಿ ನೀರಿನ ನಿರ್ವಹಣೆಯಲ್ಲಿ ಯುವ ವೃತ್ತಿಪರರನ್ನು ಪ್ರೋತ್ಸಾಹಿಸುವುದು. ತಜ್ಞರು ತಮ್ಮ ಸೇವೆಗಳು ಮತ್ತು ಪರಿಣತಿಯನ್ನು ಪ್ರದರ್ಶಿಸಲು ವೇದಿಕೆಯನ್ನು ಒದಗಿಸಲಾಗಿದೆ ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯದ ಜಲ ಸಂಪನ್ಮೂಲ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ)ಯು ಅಂತರರಾಷ್ಟ್ರೀಯ ಮಂಡಳಿ ಇವರಿಂದ ವಾಟ್ಸೇವ್ ಕರ್ನಾಟಕದ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ರೈತರ ಸಹಭಾಗಿತ್ವದ ನೀರಾವರಿ ಪದ್ಧತಿ (ಪಿಐಎಮ್)ನ್ನು ಯಶಸ್ವಿಯಾಗಿ ಅನು?ಾ?ಠನಗೊಳಿಸಲು ಕೈಕೊಂಡ ಕ್ರಮಗಳನ್ನು ಗುರುತಿಸಿ 2024 ರ ಪ್ರಶಸ್ತಿಗೆ ಉನ್ನತ ಮಟ್ಟದ ತೀರ್ಪುಗಾರರ ಸಮಿತಿಯಿಂದ ಆಯ್ಕೆಯಾಗಿದೆ.

ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಸಪ್ಟೆಂಬರ್ 3, 2024 ರಂದು ನಡೆದ 75ನೇ ಆಡಳಿತ ಕಾರ್ಯಕಾರಿಣಿ ಸಮಿತಿ (ಐ.ಇ.ಸಿ) ಅಧಿವೇಶನ ಮತ್ತು 9ನೇ ಏಷಿಯನ್ ಪ್ರಾದೇಶಿಕ ಸಮ್ಮೇಳನ ಸಮಾರಂಭದಲ್ಲಿ ಐಸಿಐಡಿ ಅಧ್ಯಕ್ಷರಾದ ಡಾ. ಮಾರ್ಕೊ ಆರ್ಸಿಯೆರಿ ಅವರು ಪ್ರಶಸ್ತಿ ಪ್ರಧಾನ ಮಾಡಿದರು. ವಾಲ್ಮಿ ಸಂಸ್ಥೆಯ ನಿರ್ದೇಶಕರಾದ ಡಾ. ರಾಜೇಂದ್ರ ಪೊ?ದ್ದಾರ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು. ಆಯೋಗದ ಸದಸ್ಯತ್ವವು ತಮ್ಮ ದೇಶಗಳನ್ನು ಪ್ರತಿನಿಧಿಸುವ ರಾಷ್ಟ್ರೀಯ ಸಮಿತಿಯ (ಓಅ) ಪ್ರತಿನಿಧಿಗಳು ಮತ್ತು ಅಂತರಾಷ್ಟ್ರೀಯ ಗಣ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ಪೋಲೀಸ್ ಠಾಣೆ: ಅಂತರ್ ಜಿಲ್ಲಾ ಕಳ್ಳರ ಬಂಧನ

**ಲಕ್ಷ್ಮೇಶ್ವರ :** ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದೇವಸ್ಥಾನ ಮತ್ತು ಮಹಿಳೆಯರ ಕೊರಳಲ್ಲಿನ ತಾಳಿ ಚೈನು ಕಳ್ಳತನ ಮಾಡಿದ ಪ್ರಕರಣಗಳ ಬೆನ್ನು ಹತ್ತಿದ್ದ ಪೊಲೀಸರು ಕೊನೆಗೂ ಭರ್ಜರಿ ಬೇಟೆಯಾಡಿ ಮೂವರು ಅಂತರ್ ಜಿಲ್ಲಾ ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹಾವೇರಿ ಜಿಲ್ಲೆಯ ಪ್ರಸಾದ್ ಅಲಿಯಾಸ್ ಗುರುರಾಜ ನಾಗರಾಜಪ್ಪ ಪ್ರದೀಪ್ ನಾಗ್ರಾಜಪ್ಪ ಶ್ರೀಕಾಂತ್ ಗುಡುಗುರ್ ಎಂಬ ಮೂರು ಆರೋಪಿಗಳನ್ನು ಖಚಿತ ಮಾಹಿತಿ ಮೇರೆಗೆ ಬಂಧಿಸಿ ಅವರಿಂದ



ಸುಮಾರು 39 ಲಕ್ಷ ರೂ ಮೌಲ್ಯದ ಚಿನ್ನ, ಬೆಳ್ಳಿ ಆಭರಣಗಳನ್ನು, ಒಂದು ಸ್ಕಾರ್ಪಿಯೋ ಒಂದು ಪಲ್ಸರ್ ಮೋಟಾರ್ ಬೈಕ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿತರು ಶಿರಹಟ್ಟಿ ಬನ್ನಿಕೊಪ್ಪ ಒಡವಿ ಗುತ್ತಲ ತುಮ್ಮಿನಕಟ್ಟಿ ನೀರಲಗಿ ಹೊಸದುರ್ಗ ಸೇರಿದಂತೆ ಎಂಟು ದೇವಸ್ಥಾನಗಳು ಮತ್ತು ಲಕ್ಷ್ಮೇಶ್ವರ ಶಿಗ್ಗಿ ಗದಗ ಕೊಟ್ಟೂರು ಹರಪನಹಳ್ಳಿ ಆನವಟ್ಟಿ ಹೊಸದುರ್ಗ ಹೀಗೆ ಏಳು ಕಡೆ ಸರಗಳತನಗಳಲ್ಲಿ ಭಾಗಿಯಾಗಿದ್ದನ್ನು ಒಪ್ಪಿಕೊಂಡಿದ್ದಾರೆ.

ಈ ಪ್ರಕರಣ ಭೇದಿಸುವಲ್ಲಿ ಶಿರಹಟ್ಟಿ ಸಿಪಿಐ ನಾಗರಾಜ್ ಮಾಡಳ್ಳಿ ಮತ್ತು ಪಿಎಸ್ಐ ಈರಣ್ಣ ರಿತ್ತಿ ಅವರಿಗೆ ಹೆಚ್ಚುವರಿ ಎಸ್ಪಿ ಎಂ ಬಿ ಸಂಕದ ಗದಗ್ ಉಪ ವಿಭಾಗದ ಡಿವೈಎಸ್ಪಿ ಜೆಎಚ್ ಇನಾಮದಾರ ಅವರ ಮಾರ್ಗದರ್ಶನದಲ್ಲಿ ತನಿಖೆಯನ್ನು ಕೈಗೊಳ್ಳಲಾಗಿತ್ತು.

ಪೊಲೀಸರ ಈ ಕಾರ್ಯಕ್ಕೆ ಬೆಳಗಾವಿ ವಲಯದ ಐಜಿಪಿ ಮತ್ತು ಗದಗ್ ಜಿಲ್ಲಾ ಪೊಲೀಸ್ ಅಧಿಕಾರಿಗಳು ಆದ ಬಿಎಸ್ ನೇಮಗೌಡ ಅವರು ಮೆಚ್ಚುಗೆ ವ್ಯಕ್ತಪಡಿಸಿ ನಗದು ಬಹುಮಾನವನ್ನು ಘೋಷಿಸಿದ್ದಾರೆ.

# ಶಿಲ್ಪ ಕಲಾ ಕೃತಿಗೆ ಜಕಣಾಚಾರ್ಯ ಅವರ ಕೊಡುಗೆ ಅಪಾರ

**ಲಕ್ಷ್ಮೇಶ್ವರ :** ಪಟ್ಟಣದ ಪುರಸಭೆಯ ಹಿರೇ ಬಣದ ಶ್ರೀ ಲಕ್ಷ್ಮಿ ಲಿಂಗ ದೇವಾಲಯದ ವೃತ್ತಕ್ಕೆ ಅಮರಶಿಲ್ಪಿ ಜಕಣಾಚಾರಿ ವೃತ್ತ ಎಂದು ನಾಮಕರಣ ಮಾಡುವಂತೆ ಆಗ್ರಹಿಸಿ ಲಕ್ಷ್ಮೇಶ್ವರ್ ತಾಲೂಕ ವಿಶ್ವಕರ್ಮ ಘಟಕದ ಪದಾಧಿಕಾರಿಗಳು ಪುರಸಭೆಯ ಅಧ್ಯಕ್ಷೆ ಎಲ್ಲವ್ವ ದುರ್ಗಣ್ಣವರ ಮತ್ತು ಮುಖ್ಯಾಧಿಕಾರಿ ಮಹೇಶ್ ಹಡ್ಡದವರಿಗೆ ಮನವಿ ಸಲ್ಲಿಸಿದರು.

ಮನವಿ ಪತ್ರದಲ್ಲಿ ಪ್ರಪಂಚದಲ್ಲಿಯೇ ಶಿಲ್ಪ ಕಲಾ ಕೃತಿಗೆ ಜಕಣಾಚಾರ್ಯ ಅವರ ಕೊಡುಗೆ ಅಪಾರವಾದದ್ದು ಇಡೀ ದೇಶದಲ್ಲಿ ಅದರಲ್ಲೂ ಕರ್ನಾಟಕದ ಮೂಲೆ ಮೂಲೆಯಲ್ಲಿ ಅಮರ್ ಶಿಲ್ಪಿ ಜಕಣಾಚಾರಿ ಅವರ ಕಲಾ ಕೃತಿಯನ್ನು ನಾವು ಕಾಣಬಹುದಾಗಿದೆ ಆದ್ದರಿಂದ ಅವರ ಹೆಸರು ಸೂರ್ಯ ಚಂದ್ರ ಇರುವವರೆಗೂ ಶಾಶ್ವತವಾಗಿರುತ್ತದೆ ಅಂತಹ ಮಹಾನ ಶಿಲ್ಪಿಗೆ ಗೌರವ ಕೊಡುವ ಮೂಲಕ ಅವರ ಹೆಸರಿನ ಒಂದು ವೃತ್ತವನ್ನು ಮಾಡಿ ನಾವೆಲ್ಲರೂ ಅವರಿಗೆ ಅಂತ ಕರಣದ ಗೌರವವನ್ನು ಸಲ್ಲಿಸೋಣ ಆದ್ದರಿಂದ ಪುರಸಭೆಯಲ್ಲಿ ಸರ್ವ ಸದಸ್ಯರು ಈ ಕುರಿತು ಒಮ್ಮತದ ನಿರ್ಣಯ ಕೈಗೊಂಡು ಅಮರಶಿಲ್ಪಿ ಜಕಣಾಚಾರಿ ವೃತ್ತ ಎಂದು ನಾಮಕರಣ ಮಾಡುವಂತೆ ಪುರಸಭೆಗೆ ಆಗ್ರಹಿಸಿದರು.

## 100 ಹಾಸಿಗೆಗಳ ತಾಲ್ಲೂಕು ಆಸ್ಪತ್ರೆ ನಿರ್ಮಾಣಕ್ಕೆ ಶಂಕು ಸ್ಥಾಪನೆ: 60 ಹಾಸಿಗೆಗಳ ತಾಯಿ-ಮಕ್ಕಳ ಆಸ್ಪತ್ರೆ ಲೋಕಾರ್ಪಣೆ

# ಖಾನಾಪುರ ಜನತೆಗೆ ಅಗತ್ಯ ವೈದ್ಯಕೀಯ ಸೌಲಭ್ಯ: ಸಚಿವ ದಿನೇಶ್ ಗುಂಡೂರಾವ್ ಭರವಸೆ

**ಬೆಳಗಾವಿ :** ಕಾಡಂಚಿನಲ್ಲಿರುವ ಖಾನಾಪುರ ತಾಲ್ಲೂಕಿನ ಜನರಿಗೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯ ಒದಗಿಸಲು ಅನುಕೂಲವಾಗುವಂತೆ 60 ಹಾಸಿಗೆಗಳ ತಾಯಿ-ಮಕ್ಕಳ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ. ಅದೇ ರೀತಿಯಲ್ಲಿ ಆದಷ್ಟು ಶೀಘ್ರದಲ್ಲೇ 100 ಹಾಸಿಗೆಗಳ ತಾಲ್ಲೂಕು ಆಸ್ಪತ್ರೆ ಕೂಡ ನಿರ್ಮಾಣವಾಗಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು ತಿಳಿಸಿದರು

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಬುಧವಾರ (ಸೆ.11) ಖಾನಾಪೂರ ಪಟ್ಟಣದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್.ಎಚ್ಚ್.ಎಂ) ಅಡಿಯಲ್ಲಿ ನಿರ್ಮಿಸಲಾದ 60 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ಉದ್ಘಾಟಿಸಿ ಬಳಿಕ ನಬಾರ್ಡ ಆರ್.ಐಡಿಎಫ್-30 ಯೋಜನೆಯಡಿಯಲ್ಲಿ 100 ಹಾಸಿಗೆಗಳ ತಾಲೂಕಾ ಸಾರ್ವಜನಿಕ ಆಸ್ಪತ್ರೆ ನಿರ್ಮಾಣ ಕಾಮಗಾರಿಯ ಶಂಕು ಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಖಾನಾಪುರದ ಸಾರ್ವಜನಿಕ ಆಸ್ಪತ್ರೆಗೆ ಅಗತ್ಯವಿರುವ ವೈದ್ಯರು, ಸಿಬ್ಬಂದಿ, ಮೂಲಸೌಕರ್ಯ ಹಾಗೂ ವೈದ್ಯಕೀಯ ಉಪಕರಣಗಳನ್ನು ಸರಕಾರ ಒದಗಿಸಲಿದೆ ಎಂದು ಭರವಸೆ ನೀಡಿದರು.

ಆರೋಗ್ಯ ವ್ಯವಸ್ಥೆಯಲ್ಲಿ ತಾಯಿ ಮಗು ಆರೋಗ್ಯಕ್ಕೆ ಪ್ರಾಮುಖ್ಯತೆ ಕೊಡಬೇಕು. ತಾಯಿ ಗರ್ಭದಲ್ಲೇ ಮಗು ಆರೋಗ್ಯವಾಗಿರಬೇಕು ಎಂದರೆ ತಾಯಿ ಆರೋಗ್ಯ ಅತೀ ಮುಖ್ಯ. ಇದರಿಂದ ಮಗು ಆರೋಗ್ಯಕರವಾಗಿ ಬೆಳೆಯಲಿದೆ ಎಂದು ಹೇಳಿದರು.

ಹೆರಿಗೆಯ ನಂತರ ಮಗು ಆರೋಗ್ಯಕರ ಬೆಳವಣಿಗೆ ಹೊಂದಬೇಕು ಎಂದ- ರೆ ಮಗು ಗರ್ಭದಲ್ಲಿ ಇರುವಾಗಲೇ ತಾಯಿಗೆ ಪೌಷ್ಟಿಕ ಆಹಾರ ನೀಡಬೇಕು ಇದರಿಂದ ಯಾವುದೇ ತೊಂದ್ರೆ ಇಲ್ಲದೇ ಮಗು ಮನಸಿಕ, ದೈಹಿಕವಾಗಿ ಆರೋಗ್ಯಕರವಾಗಿರಲಿದೆ.

ಯುವ ಸಮುದಾಯ ಸಮಾಜಕ್ಕೆ ಅಸ್ತಿಯಾಗಬೇಕು. ಒಳ್ಳೆ ಆರೋಗ್ಯ ಹಾಗೂ ಶಿಕ್ಷಣ ನೀಡಿದರೆ ಮಾತ್ರ ದೇಶ



ಪ್ರಗತಿ ಹೊಂದಲಿದೆ. ದೇಶ ರಾಜ್ಯದ ಅಭಿವೃದ್ಧಿಗೆ ಎಲ್ಲರೂ ಸ್ವಾವಲಂಬನೆಯಾಗಿ ಬದುಕಬೇಕು.

100 ಬೆಡ್ ಗಳ ಹೊಸ ಸಾರ್ವಜನಿಕ ತಾಲ್ಲೂಕು ಆಸ್ಪತ್ರೆ ಶೀಘ್ರದಲ್ಲೇ ನಿರ್ಮಾಣವಾಗಲಿದೆ. ಆಸ್ಪತ್ರೆ ಅಗತ್ಯವಿರುವ ಕ್ಷೇತ್ರಗಳನ್ನು ಗಮನಿಸಿ ಮುಖ್ಯಮಂತ್ರಿಗಳು ಹೊಸ ಆಸ್ಪತ್ರೆ ನಿರ್ಮಾಣಕ್ಕೆ ಅನುಮೋದನೆ ನೀಡಿರುತ್ತಾರೆ. ಈಗಾಗಲೇ ಖಾನಾಪೂರ ತಾಲೂಕಿನ ನೂತನ ಸಾರ್ವಜನಿಕ ಆಸ್ಪತ್ರೆ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಶೀಘ್ರದಲ್ಲೇ ಆಸ್ಪತ್ರೆ ಕಟ್ಟಡ ಕಾಮಗಾರಿ ಪೂರ್ಣಗೊಳಿಸಿ ಉದ್ಘಾಟನೆ ನೆರವೇರಿಸಲಾಗುವುದು ಎಂದು ಹೇಳಿದರು.

ಸ್ಥಳೀಯ ಶಾಸಕರ ಬೇಡಿಕೆಯಂತೆ ಕೆಲವು ಭಾಗಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ನಿರ್ಮಾಣವಾಗಬೇಕಿದ್ದು, ಇವುಗಳನ್ನು ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು.

ಸರ್ಕಾರ ಮಹಿಳಾ ಸಬಲೀಕರಣಕ್ಕೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದೆ. ಕಾಪೂಲಿಯಲ್ಲಿ 65 ಲಕ್ಷದ ಉಪ ಕೇಂದ್ರ ನಿರ್ಮಿಸಲಾಗುವುದು. ಇಟಗಿ, ನಂದಗಡ, ಪಾರಿಶ್ವಾಡ, ಕಕ್ಕೇರಿ, ಬೀಡಿ, ಭಾಗದಲ್ಲಿ ಆರೋಗ್ಯ ಇಲಾಖೆಯ ಬೇರೆ ಬೇರೆ ಕಾಮಗಾರಿಗಳಿಗೆ ಸುಮಾರು 3 ಕೋಟಿ 50 ಲಕ್ಷ ಅನುದಾನ ನೀಡಲಾಗುವುದು ಅದೇ ರೀತಿಯಲ್ಲಿ ಸ್ಥಳೀಯ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು ತಿಳಿಸಿದರು.

ರಾಜ್ಯದ ಎಲ್ಲ ಶಾಲಾ ಮಕ್ಕಳಿಗೆ ವಾರದ 6 ದಿನಗಳು ಮೊಟ್ಟೆ ವಿತರಣೆ ಮಾಡಲಾಗುವುದು. ವಿಪ್ರೋ ಸಂಸ್ಥಾಪಕ ಅಜೀಂ ಪ್ರೇಮಜಿ ಅವರು ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ 1500 ಕೋಟಿ ರೂಪಾಯಿ ವೆಚ್ಚದಲ್ಲಿ 3 ವರ್ಷದವರೆಗೆ ಪ್ರತಿದಿನ ಮೊಟ್ಟೆ ನೀಡಲಿದ್ದಾರೆ ಅವರ ಕಾರ್ಯ ಇತರರಿಗೆ ಮಾದರಿ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಖಾನಾಪೂರ ಶಾಸಕ ವಿಠ್ಠಲ ಹಲಗೇಕರ ಮಾತನಾಡಿ, ಖಾನಾಪೂರ ತಾಲ್ಲೂಕಿನಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಇಲ್ಲದಂತಾಗಿತ್ತು. ಆಸ್ಪತ್ರೆಯಲ್ಲಿ ಕೂಡ ಸಾಕಷ್ಟು ಮೂಲಭೂತ ಸೌಕರ್ಯಗಳ ಕೊರತೆಯಿತ್ತು. ತಾಲ್ಲೂಕಿನ ಸಾರ್ವಜನಿಕರ ತೊಂದರೆ ಗಮನದಲ್ಲಿಟ್ಟುಕೊಂಡು ಸರ್ಕಾರದಿಂದ ಎರಡು ಆಸ್ಪತ್ರೆಗಳನ್ನು ಕೊಡುಗೆಯಾಗಿ ನೀಡಿದೆ. ತಾಯಿ ಮಕ್ಕಳ ಆಸ್ಪತೆಯಂತೆ ಮುಂದಿನ ದಿನಗಳಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ವ್ಯವಸ್ಥಿತವಾಗಿ ನಿರ್ಮಿಸಿ ಅತೀ ಶೀಘ್ರದಲ್ಲಿ ಉದ್ಘಾಟಿಸಲಾಗುವುದು ಎಂದರು.

ಈ ಭಾಗದಲ್ಲಿ ಬಹಳ ಮಳೆಯಾಗುವುದರಿಂದ ರಸ್ತೆಗಳು ಹಾಳಾಗಿವೆ. ತಾಲ್ಲೂಕು ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಬೇಕಿದೆ. ಈ ನಿಟ್ಟಿನಲ್ಲಿ ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ನಿರಂತರ ಶ್ರಮಿಸಲಾಗುವುದು. ಚಾಪಗಾವಿ, ಕಕ್ಕೇರಿ, ಜಾಂಬೋಟಿ ಸೇರಿದಂತೆ ತಾಲ್ಲೂಕಿನಲ್ಲಿ ಅಗತ್ಯವಿರುವ ಕಡೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ವಹಿಸಬೇಕು' ಎಂದು ಶಾಸಕ ವಿಠ್ಠಲ ಹಲಗೇಕರ ಮನವಿ ಮಾಡಿಕೊಂಡರು.

ಇದಕ್ಕೂ ಮುಂಚೆ ಮಾತನಾಡಿದ ಖಾನಾಪೂರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್ ಅವರು, ಖಾನಾಪೂರ ತಾಲ್ಲೂಕಿನಲ್ಲಿ ತಾಯಿ-ಮಕ್ಕಳ ಆಸ್ಪತ್ರೆಯಾಗಿರುವುದು ಹೆಮ್ಮೆಯ ವಿಷಯ. ಖಾನಾಪೂರ ತಾಲೂಕಿನ ಗರ್ಭಿಣಿಯರು ಹೆರಿಗೆ ಸಮಯದಲ್ಲಿ ಬೆಳಗಾವಿಗೆ ಹೋಗುವುದು ಅನಿವಾರ್ಯವಾಗಿರುವ ತಮ್ಮ ಅವಧಿಯಲ್ಲಿ ತಾಯಿ ಮಕ್ಕಳ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿತ್ತು. ಅದರಂತೆ ತಾಯಿ ಮಕ್ಕಳ ಆಸ್ಪತ್ರೆ ನಿರ್ಮಾಣವಾಗಿದೆ ಎಂದರು.

ಈ ಆಸ್ಪತ್ರೆ ಸೌಲಭ್ಯ ಪ್ರತಿಯೊಬ್ಬ ಮಹಿಳೆಯರಿಗೂ ತಲುಪುವ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸಬೇಕು. ಖಾನಾಪೂರ ತಾಲ್ಲೂಕಿನ ತಾಯಂದಿರಿಗೆ ತಾಯಿ ಮಕ್ಕಳ ಆಸ್ಪತ್ರೆ ಸದ್ಬಳಕೆಯಾಗಲಿದೆ ಎಂದು ಅಂಜಲಿ ನಿಂಬಾಳ್ಕರ್ ಅವರು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಖಾನಾಪೂರ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಮಹೇಶ್ ಕಿವುಡಸಣ್ಣವರ, "ಈಗಾಗಲೇ ಇರುವ ಆಸ್ಪತ್ರೆ ಹಳೆಯದಾದ ಕಾರಣ ಸರ್ಕಾರ 100 ಹಾಸಿಗೆಯ ಆಸ್ಪತ್ರೆ ಶಂಕುಸ್ಥಾಪನೆ ನೆರವೇರಿಸಿಲಾಗಿದೆ. ತಾಯಿ ಮಗು ಮರಣ ಪ್ರಮಾಣ ತಗ್ಗಿಸುವ ನಿಟ್ಟಿನಲ್ಲಿ ಆಸ್ಪತ್ರೆ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ" ಎಂದು ಹೇಳಿದರು. 60 ಹಾಸಿಗೆಗಳ ತಾಯಿ-ಮಕ್ಕಳ ಆಸ್ಪತ್ರೆ ನಿರ್ಮಾಣ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಬಂದಂತಹ ಸಾಕಷ್ಟು ಯೋಜನೆಗಳನ್ನು ಎಲ್ಲರೂ ಬಳಸಿಕೊಂಡು ತಾಯಿ-ಮಗು ಮರಣ ಪ್ರಮಾಣ ನಿಯಂತ್ರಿಸಲಾಗುವುದು ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ, ಬುಡಾ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ರಾಹುಲ್ ಶಿಂಧೆ, ಖಾನಾಪೂರ ತಹಶೀಲ್ದಾರ್ ಪ್ರಕಾಶ ಗಾಯಕವಾಡ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ವಿನಯ ನಾವಲಗಟ್ಟಿ ಸೇರಿದಂತೆ ಆರೋಗ್ಯ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು,

# ಭಾದ್ರಪದಮಾಸ ಸಂಭ್ರಮ ಸವಿಯುವ ಮಾಸ



ಸನಾತನ ಧರ್ಮ ವರ್ಷ ಪೂರ್ಣ ಮಾಸ, ತಿಥಿಳ ವಿಶೇಷತೆಗಳಿಂದ ಆಚರಿಸುವ ಪ್ರಾಚೀನ, ಪರಂಪರೆ, ಸಂಸ್ಕ್ರತಿ ಕಲಿಸುವ ವೈಶಿಷ್ಯತೆ ಹೊಂದಿರುತ್ತವೆ. ಅಂಥ ಧರ್ಮದ ಪುಣ್ಯಭೂಮಿ ಭಾರತದೇಶ, ನಾವು ಜೀವಿಸುವದು ಪರಮಾನಂದ.ಹಿರಿಯರಿಂದ ಜ್ಞಾನಿಗಳಿಂದ ತಿಳಿದುಕೊಂಡು ಮುಂದೆ ಅನುಸರಿಸುವ ಕರ್ತವ್ಯವಾಗಿದೆ. ಭಾದ್ರಪದಮಾಸದ ಪ್ರಾರಂಭ ಗೌರಿಹಬ್ಬದಿಂದಲೇ ಆರಾಧೀಸುವದು ವಿಶೇಷವಾಗಿದೆ. ಶುಕ್ಲತೃತೀಯಾ ಸ್ವರ್ಣ ಗೌರಿ ಹಬ್ಬ. ಮುತ್ತೈದಿಯರಿಗೆ ಬಾಗಿನನೀಡಿ ಮನೆಗೆ ಮಂಗಳ ಹಾಗೂ ಇಷ್ಟಾರ್ಥಫಲಗಳನ್ನೂ ಬಯಸುವದು. ಶ್ರದ್ದೆ-ಭಕ್ತಿಗಳಿಂದ ಗೌರಿಪೂಜೆಮಾಡಿ ಮರದಬಾಗಿನಕೊಡುವದು. ಬಿದಿರಿನ ಮೊರದ ಮಹತ್ವ ಅಪಾರವಾಗಿದೆ. ಬಿದಿರು ಜೀವಿ ಹುಟ್ಟಿನಿಂದ ಅಂತ್ಯದವರೆಗೆ ಬೇಕೆಬೇಕು. ಬಿದಿರು ಎಂದ- ರೆ ಮಹಾಲಕ್ಷ್ಮೀಸನ್ನಿಧಾನವೆಂದು ಕಾಣುತ್ತೇವೆ. ಬಿದಿರಿನ ಮೊರದಲ್ಲಿ ಅರಿಷಣ, ಕುಂಕುಮ, ಬಳೆ,ಕರಿಮಣಿ ಮುಂಗಳನ್ನು ಸಾಕಷ್ಟು ಇಟ್ಟು ಹಿರಿಯ ಮುತ್ತೈದಿಯರಿಗೆ ಕೊಟ್ಟು ತ್ರಿಕರ್ಣಪೂರ್ವಕ ನಮಸ್ಕರಿಸಿ, ಆಶೀರ್ವಾದಪಡೆದಾಗ ಜೀವನ ನೆಮ್ಮದಿಯಿಂದ ಶತವರುಷ ಬಾಳೆಂದು ಹರಿಸುತ್ತಾರೆ. ಬದುಕನ್ನು ಮಹಾತಾಯಿ ಸ್ವ- ರ್ಣಗೌರಿ ಸುವರ್ಣಮಯ ಮಾಡುತ್ತಾಳೆಂಬ ನಂಬಿಕೆ. ಇನ್ನೊಂದು ವಿಶೇಷತೆ ಹೆತ್ತತಾಯಿಗೆ ಬಾಗಿನನೀಡುವ ಆದ್ಯತೆ ಹೆತ್ತು, ಹೊತ್ತು ಸಾಕಿ ಸಲುಹಿ ಗುರುವಾಗಿ ಬದುಕನ್ನು ಕಲಿಸಿ ಸಂಸ್ಕೃತ ಮನೆಗೆ ಕನ್ಯಾದಾನಮಾಡಿದ ಕೀರ್ತಿವಂತಳು. ಅಂದು ಅವಳನ್ನು ಗೌರವಿಸಲು, ಉಪಕಾರಗಳನ್ನೇ ಮಾಡಿದ ಕಾರುಣ್ಯಮೂರ್ತಿಗೆ ನಮಗೆ ದೊರೆತಪರ್ವಕಾಲವಾಗಿದೆ. ಕೆಲವರ ಮನೆಯಲ್ಲಿ ಹರಿಕಾಲಿಕೆವ್ರತಾಚರಣೆಗಳನ್ನು ಮಾಡುವರು. ಸಕಲಕಾರ್ಯಗಳಲ್ಲಿ ಪ್ರಥಮ ಪೂಜೆಗೊಳ್ಳುವ "ಗಣಪತಿ" ಹಬ್ಬ ಬರುವದು ವಿಶೇಷವಾಗಿ ಪುರುಷರು ಸಂಭ್ರಮದಿಂದ ಆಚರಿಸುವ ದೊಡ್ಡಹಬ್ಬ. ಮನೆ, ಕೇರಿ, ಸಂಘ ಮುಂತಾದ ಕಡೆಗಳಲ್ಲಿ ನಾನಾ ಅಲಂಕಾರಗಳಿಂದ ಆಚರಿಸುವರು. ಪಟಾಕಿಗಳಮೆರಗು ನೋಡುವಂತಹದ್ದು. ಋಷಿಪಂಚಮಿ ವ್ರತಬರುವದೇಪಂಚಮಿ. ಜನ್ಮಜನ್ಮಾಂತರ ಸ್ತ್ರೀಯರು ಮಾಡುವ ದೋಷಗಳನ್ನು ಕಳೆಯುವದು. ಸಪ್ತಋಷಿಗಳ ಪೂಜೆ, ಉಪವಾಸ, ದಂಪತಿಗಳ ಕಳೆಯುವದು. ಸಪ್ತ ಋಷಿಗಳಪೂಜೆ. ಉಪವಾಸ ಧಂಪತಿಗಳ ಸುಗ್ರಾಸಭೋಜನಗಳಿರುವದು. ಶ್ರೀಕೃಷ್ಣನು ಯುಧಿಷ್ಠರನಿಗೆ ಉಪದೇಶ ಮಾಡಿದ್ದಾನೆ. ಮುಂದೆ ಅಷ್ಟಮಿ ಬರುವವದೇ ದಾರದ ಹಬ್ಬವೆಂದೇ ಪ್ರಸಿದ್ಧವಾಗಿದೆ, ಸುವಾಸಿನಿಯರಿಗೆ ಸಕಲಸೌಭಾಗ್ಯ ನೀಡುವ ಹಬ್ಬ ಪಾರ್ವತಿಹಾಗೂ ಮಹಾದೇವರು ಭೂಲೋಕಕ್ಕೆ ಬಂದು ಪೂಜೆಗೊಳ್ಳುವರು. ಅಷ್ಟಮಿ ಅನುರಾಧಾ ನಕ್ಷತ್ರದಂದು ಗೌರಿಗೆ ಆಹ್ವಾನಿಸುತ್ತಾರೆ ನಿಯಮದಂತೆ ದಾರಹಾಕಿ ಕೂಡಿಸುವರು. ಜೇಷ್ಠಾ ನಕ್ಷತ್ರದಂದು ಪೂಜೆಮಾಡಿ ನಾನಾತರಹದ ಭಕ್ಷ್ಯಗಳನ್ನು ಮಾಡಿ ನೇವಿದ್ಯಮಾಡುವರು. ಮರುದಿನ ಅವಳನ್ನು ಇಳಿಸಿ ನಿರ್ಮಾಲ್ಯವನ್ನು ಕಥೆಕೇಳಿ ದಾರದಲ್ಲಿ ಹಾಕಿಕೊಂಡು ಮತ್ತೈದಿಯರು ಒಬ್ಬರಿಗೊಬ್ಬರು ಹಾಕಿ ಉಡಿ ತುಂಬಿಕೊಳ್ಳುವರು. ವಿಷ್ಣುವಿನ ಅವತಾರಗಳಾದ ವರಾಹ ಹಾಗೂ ವಾಮನ ಅವತಾರಗಳು ಹುಟ್ಟಿದ ಪರ್ವಕಾಲವು. ಭಾಗವತ ಶ್ರವಣ ಮಾಡುವದು ಭಾದ್ರಪದಮಾಸದಲ್ಲಿಯೇ. ಕೊನೆಯ ಹಬ್ಬವೇ ಅನಂತವ್ರತವಾಗಿದೆ. ಇದು ಶ್ರೇಷ್ಠವಾದವ್ರತವಾಗಿದೆ, ಧರ್ಬೆಯಿಂದ ಅನಂತಶೇಷನನ್ನು ಮಾಡಿ ವೈಭವದಿಂದ ಪೂಜಿಸಿ, ಕಥೆಶ್ರವಣ ಮಾಡುವ ಪದ್ಧತಿಯಿದೆ. ಅನಂತನದಾರ ಕಟ್ಟಿಕೊಳ್ಳವದು. ಭಾದ್ರಪದಮಾಸ ಶುಕ್ಲವ್ರತಗಳ ಹಬ್ಬವಾದರೆ, ಕೃಷ್ಣಪಕ್ಷ ಹಿರಿಯರಹಬ್ಬ ವೆಂದು ಹೇಳಬಹುದು, ಪಿತೃಗಳಿಗೆ ಭಕ್ತಿ, ಶ್ರದ್ದೆಗಳಿಂದ ಪಿಂಡಪ್ರಧಾನ ಶ್ರಾದ್ದ ಮಡಿ, ಅವರ ಅನುಗ್ರಹ ಅನುದಿನ ಪಡೆಯುವದು. ಗೌರವಾನ್ವಿತ ಹಬ್ಬ ತಪ್ಪದೇ ಅಧಿಕಾರವಿದ್ದವರೆಲ್ಲರೂ ಪಿತೃಗಳಹಬ್ಬ ಆಚರಿಸಲೇಬೇಕು. ಪಿತೃಗಳ ಶಾಪವುಉಗ್ರವಾದದ್ದು ಅವರನ್ನು ಬಿಟ್ಟು ನೀವು ಯಾವುದೇ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿದರೂ ಶ್ರೀಹರಿಯು ಒಪ್ಪಲಾರನು. ಪಾಪವೇ ನಮಗೆ ಹೊಂದಿಕೊಳ್ಳುತ್ತದೆ. ಈ ಭಾದ್ರಪದಮಾಸ ವೃತಗಳಿಂದ ಹಿರಿಯರ ಸ್ಮರಣೆ ಹಬ್ಬಗಳಿಂದ ಸಂಯೋಜಿತವಾದ ಸುಂದರಮಾಸ ಎಲ್ಲರಗೂ ಶ್ರೀಹರಿ ವಾಯು, ಗುರುಗಳ ಅನುಗ್ರಹ ಅನುದಿನ ವಿರಲಿ.

– ಗೀತಾ. ಸಂ.ಮಿರ್ಜಿ

# ಮಹಾತ್ಮರ ವಚನಗಳನ್ನ ಕೇಳಿದರೆ ಗುಣ ದೋಷಗಳು ನಾಶವಾಗುತ್ತವೆ

**ಮುಧೋಳ :** ಪುರಾಣ ಪುಣ್ಯ ಕಥೆಗಳನ್ನು ಕೇಳುವುದು.ಮಹಾತ್ಮರದರ್ಶನವನ್ನುಮಾಡುವುದು. ಮಹಾತ್ಮರಿಂದ ಉಪದೇಶವನ್ನು ಕೇಳುವುದರಿಂದ ಮನಸ್ಸಿನ ಗುಣದೋಷಗಳು ನಾಶವಾಗುತ್ತವೆ ಎಂದು ಪಂಚಮಠಾಧೀಶ, ಸಾಧು ಚಕ್ರವರ್ತಿ, ಶ್ರೀ ಶಿವಾನಂದ ಭಾರತಿ ಶ್ರೀಗಳು ಹೇಳಿದರು. ಅವರು ತಾಲೂಕಿನ ಮುಗಳಖೋಡದ ಜಗದ್ಗುರು ಶಿವಾನಂದ ಭಾರತಿ ಅಪ್ಪಾಜಿಯವರಆಶ್ರಮದಲ್ಲಿ2024"ಶ್ರಾವಣಸಂಭ್ರಮ ಕಾಯ9ಕ್ರಮದಲ್ಲಿ ಶಿವಾವತಾರಿ ಶ್ರೀ ಸಿದ್ಧಾರೂಢರ ಪುರಾಣ ಮಂಗಲೋತ್ಸವ ಸಮಾರಂಭದ ಪಾವನ ಸಾನಿಧ್ಯವನ್ನು ವಹಿಸಿ ಮಾಸಿಕ ಶಿವಾನುಭವ ಕಾಯ9ಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಸಂತ, ಮಹಾತ್ಮರ ಸಂಗವನ್ನು ಮಾಡುವುದರಿಂದ ಹೃದಯ ಅರಳುತ್ತದೆ. ಸಂಕಲ್ಪಗಳು ಸಿದ್ಧಿ ಆಗುತ್ತವೆ. ತಮಗೆಲ್ಲ ಸತಿ , ಸುತ,ಧನ ಇತ್ಯಾದಿ ಇಚ್ಚಿತಾರ್ಥಗಳು ಪೂರ್ಣಗೊಳ್ಳುತ್ತವೆ ಎಂದು ಆಶೀರ್ವದಿಸಿದರು. ಒಂದು ತಿಂಗಳ ಪಯ9ಂತ ಪುರಾಣವನ್ನು ನಡೆಸಿಕೊಂಡು ಬಂದಿರುವ ಸಿದ್ಧಾರೂಢ ಭಾರತಿ ಆಶ್ರಮದ ಶರಣಬಸವ ಶಾಸ್ತ್ರಿಗಳು ಭಾರತಿ ಅಪ್ಪಾಜಿಯವರಿಂದ ಗೌರವವನ್ನು ಸ್ವೀಕರಿಸಿ ಮಾತನಾಡುತ್ತಾ ಸಿದ್ಧಾರೂಢರೆಂಬ ನಾಮ ಅದೊಂದು ಕಲ್ಪವೃಕ್ಷವಿದ್ದಂತೆ, ಕಾಮಧೇನು. ಬೇಡಿದ್ದನ್ನಕೊಡುವಂತಹಮಹಾಶಕ್ತಿ.ಸಿದ್ಧನನೆನೆದರೆ ಇಲ್ಲ ಭಯ ಎಂದು ಹೇಳಿದರು. ಸಮಾರಂಭದ ನೇತೃತ್ವವನ್ನು ಶ್ರೀಮಠದ ಸಂಸ್ಥಾಪಕರಾದ ಶಂಕರಾನಂದ ಶ್ರೀಗಳು ವಹಿಸಿದ್ದರು. ಕುಳಲಿಯ ಭೀಮಾವಧೂತ ಮಠದ ಪೂಜ್ಯಶ್ರೀ ಪಂಚಾಕ್ಷರಿ ಶ್ರೀಗಳು ಉಪಸ್ಥಿತರಿದ್ದರು. ಮುಗಳಖೋಡದ ಶಿವಾನಂದ ಶ್ರೀಗಳು ಸಮ್ಮುಖತ್ವವನ್ನು ವಹಿಸಿದ್ದರು. ಶ್ರೀಮಠದ ಭಕ್ತ ಸಮೂಹ ಶ್ರೀ ಶಿವಾನಂದ ಭಾರತಿ ಶ್ರೀಗಳಿಗೆ ತುಲಾಭಾರವನ್ನು ಮಾಡಿ ಗುರುರಾಜ ಸಿದ್ಧಾರೂಢ ಸಮರ್ಥ ಬೆಳಗುವೆ ನಾರತಿಯ ಎಂಬ ಮಂಗಲವನ್ನ ಪಾಡಿ ಸಂಭ್ರಮಪಟ್ಟರು. ಮುತ್ತೈದೆಯರು ಆರತಿ, ಕುಂಭ ಹೊತ್ತು ಗುರುಗಳನ್ನ ಬರಮಾಡಿಕೊಂಡರು. ಸೇವೆ ಮಾಡಿದ ಸೇವಕರನ್ನು ಗೌರವಿಸಲಾಯಿತು.ಭಕ್ತರಿಗೆ ಸಿದ್ಧಾರೂಢ ಕಥಾಮೃತದ ಗ್ರಂಥಗಳನ್ನು ನೀಡಲಾಯಿತು. ಪರಮಾನಂದ ಕಲ್ಲಪ್ಪ ಮಂಟೂರ, ಬಿ. ಎಚ್. ಮುಂಡಿಗನಾಳ, ಸಂಗಪ್ಪ ಬೆನ್ನೂರ, ಭೀಮಪ್ಪ ಶಂಕ್ರಪ್ಪ ಜಮಖಂಡಿ, ಲಕ್ಷ್ಮಣ ಜಮಖಂಡಿ, ಮಹಾದೇವ ರಂಗಾಪೂರ, ಮಹಾಲಿಂಗಪ್ಪ ಕಲ್ಲೋಳಿ, ಮಲ್ಲು ಮದಕರಿ, ಗೋಪಾಲ ದಾಭೋಳಿ, ಹಣಮಂತ ಕೌಜಲಗಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ಮಹಿಳಾ ಅಕ್ಕನ ಬಳಗದವರಿಂದ ಸಿದ್ಧಾರೂಢರ ನಾಮ ಜಪ ಯಜ್ಞ ಹಾಗೂ ನಮಃ ಶಿವಾಯ ಎಂಬ ಮಹಾಮಂತ್ರ ಸಮಸ್ತ ಜನರಿಗೆ ಆನಂದವನ್ನು ನೀಡಿತು. ಮಂಗಲೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಮಸ್ತ ಜನತೆ ಮಂಗಲವನ್ನು ಪಾಡಿ ಪ್ರಸಾದವನ್ನು ಸ್ವೀಕರಿಸಿದರು. ಮಂಗಲೋತ್ಸವ ಅರ್ಥಪೂರ್ಣವಾಗಿ ಜರುಗಿತು.

# ದುಬೈ ಕನ್ನಡಿಗರೊಂದಿಗೆ ಬೆರೆತ ಡಾ ಹನುಮಂತನಾಥ ಶ್ರೀಗಳು ದುಬೈವರೆಗೂ ವಿಸ್ತರಿಸಿದ ಕನ್ನಡಿಗರ ಉದ್ಯಮ ಸಾಮ್ರಾಜ್ಯ

**ದುಬೈ :** "ಜೀವನ ಕಟ್ಟಿಕೊಳ್ಳಲು ಉದ್ಯೋಗವರಸಿ ದುಬೈಗೆ ತೆರಳಿದ ಅನೇಕ ಕನ್ನಡಿಗರು, ಅಲ್ಲಿಯೇ ನೆಲೆ ನಿಂತು ತಮ್ಮದೇ ಉದ್ಯಮ ಸ್ಥಾಪಿಸುವುದರ ಮೂಲಕ ಕನ್ನಡ ವ್ಯವಹಾರಿಕ ಸಾಮ್ರಾಜ್ಯವನ್ನು ಕರುನಾಡಿನಿಂದ ದುಬೈವರೆಗೂ ವಿಸ್ತರಿಸಿದ್ದಾರೆ. ಇದು ಕನ್ನಡಿಗರೆಲ್ಲರೂ ಅಭಿಮಾನಪಡುವ ಸಂಗತಿಯಾಗಿದೆ" ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಇತ್ತೀಚೆಗೆ ನೇಮಕವಾಗಿರುವ ತುಮಕೂರು ಜಿಲ್ಲೆ, ಕೊರಟಗೆರೆ ತಾಲೂಕು, ಎಲೇರಾಂಪುರದಲ್ಲಿರುವ ಶ್ರೀ ಕುಂಚಿಟಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ




ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ ಹನುಮಂತನಾಥ ಮಹಾಸ್ವಾಮಿಗಳು ಅವರು ದುಬೈನಲ್ಲಿರುವ ಪರ್ವ ಸಮೂಹದ ಕಂಪನಿಗಳಿಗೆ ಭೇಟಿ ನೀಡಿ ದುಬೈ ಕನ್ನಡಿಗರ ಸಾಹಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪರ್ವ ಸಮೂಹ ಕಂಪನಿಗಳ ಸಂಸ್ಥಾಪಕರಾದ ನೀಲೇಶ್ ಎಚ್ ಪಿ ಮತ್ತು ಕಚೇರಿಯ ಸಿಬ್ಬಂದಿ, ಶಿಕ್ಷಕರಾದ ಹರೀಶ್ ಮೊದಲಾದವರು ಉಪಸ್ಥಿತರಿದ್ದರು.

ದುಬೈನಲ್ಲಿರುವ ಜುಬಿಲಿ ಪಾರ್ಕ್ ನಲ್ಲಿ ಇತ್ತೀಚಿಗೆ ಗಣೇಶೋತ್ಸವ ಕಾರ್ಯಕ್ರಮವನ್ನು, ನೀಲೇಶ ಎಚ್ ಪಿ ಯವರು ಆಯೋಜಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ತಿಳಿಸಿದ್ದಾರೆ.

**ವರದಿ: ಮಣ್ಣೆ ಮೋಹನ್**

# ರಾಜೇಂದ್ರ ಭದ್ರನ್ನವರರ ಸನ್ಮಾನ



**ರಬಕವಿ :** ಕಾಂಗ್ರೆಸ್ ಪಕ್ಷದ ಬಾಗಲಕೋಟ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ಕಾಂಗ್ರೆಸ್ ಮುಖಂಡರಾದ ರಾಜೇಂದ್ರ ಸುಭಾಷ್ ಭದ್ರಣ್ಣವರ ಅವರಿಗೆ ಅಭಿನಂದಿಸಿ ರಾಹುಲ್ ಕಲಾಲ ಅವರು ಸನ್ಮಾನ ಮಾಡಿದರು. ಈ ಸಂದರ್ಭದಲ್ಲಿ ದೇವಪ್ಪ ಮಹೇಶ್ ವಾಡ್ಗಿ , ಮಾರ್ನಿಂಗ್ ಸಚಿನ ಹಟ್ಟಿ, ಮುಧೋಳ ಗುರು ಶಾಸ್ತ್ರಿ ಗೊಲ್ಲರ, ಸಮೀರ್ ತಾಳಿಕೋಟಿ, ಶಾಹಿದ್ ಇನಾಮದಾರ, ಸುರೇಶ ನಿಸುರ, ಕಾಡಪ್ಪ ಜಿಡ್ಡಿಮನಿ, ಪವನ ಮಿರ್ಜಿ, ಶ್ರೀಶೈಲ ರೇವಣ ಸಿದ್ದೇಗೌಡ, ಗಜು, ಪಿಂಟು, ಮಾದೇವ ಹಾಗೂ ಇನ್ನೂ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

# ಬಾಕಿ ವಿದ್ಯುತ್ ಬಿಲ್ ಪಾವತಿಸುವುದಿಲ್ಲ

## ವಿದ್ಯುತ್ ಮಗ್ಗಗಳ ನೇಕಾರರಿಂದ ರಾಜ್ಯ ಸರ್ಕಾರಕ್ಕೆ ಪತ್ರ



**ರಬಕವಿ–ಬನಹಟ್ಟಿ :** ನೇಕಾರರು ಪಾವತಿಸಬೇಕಾದ ಬಾಕಿ ವಿದ್ಯುತ್ ಬಿಲ್ಲನ್ನು ಪಾವತಿಸುವುದಿಲ್ಲ. ಬಾಕಿ ಇರುವ ನೇಕಾರರ ವಿದ್ಯುತ್ ಬಿಲ್ಲನ್ನು ರಾಜ್ಯ ಸರ್ಕಾರವೇ ಭರಿಸಬೇಕು ಎಂದು ಬನಹಟ್ಟಿಯ ನೇಕಾರ ಮುಖಂಡ ಮಹಾದೇವ ನುಚ್ಚಿ ತಿಳಿಸಿದರು. ಅವರು ಬುಧವಾರ ಈಶ್ವರಲಿಂಗ ಮೈದಾನದಲ್ಲಿರುವ ಅಂಚೆ ಕಚೇರಿಯ ಹತ್ತಿರ ಪತ್ರಗಳನ್ನು ರಾಜ್ಯ ಸರ್ಕಾರಕ್ಕೆ ರವಾನೆ ಮಾಡಿ ಮಾತನಾಡಿದರು.

ಈಗಾಗಲೇ ನೇಕಾರರು ಸಂಕಷ್ಟದ ಸ್ಥಿತಿಯಲ್ಲಿದ್ದಾರೆ. ಬಾಕಿ ಉಳಿದಿರುವ ನೇಕಾರರ ವಿದ್ಯುತ್ ಬಿಲ್ಲನ್ನು ನೇಕಾರರು ಪಾವತಿಸುವುದು ಸಾಧ್ಯವಾಗುವುದಿಲ್ಲ. ಸರ್ಕಾರ ರೈತರಂತೆ ನೇಕಾರರಿಗೂ ಸೌಲಭ್ಯಗಳನ್ನು ನೀಡಲಿ. ಸರ್ಕಾರ ನೇಕಾರರಿಗೆ ಕಾರ್ಮಿಕರ ಸೌಲಭ್ಯಗಳನ್ನು ನೀಡಬೇಕು ಎಂದು ಆಗ್ರಹಿಸಿ ಈಗಾಗಲೇ ಬೆಂಗಳೂರು, ಬಾಗಲಕೋಟೆ ಸೇರಿದಂತೆ ಅನೇಕ ಕಡೆಗಳಲ್ಲಿ ಚಳುವಳಿಯನ್ನು ಕೈಗೊಳ್ಳಲಾಗಿತ್ತು. ಅಧಿಕಾರಿಗಳಿಗೆ ಮನವಿಯನ್ನೂ ನೀಡಲಾಗಿತ್ತು. ಜನ ಸ್ಪಂದನ ಕಾರ್ಯಕ್ರಮದಲ್ಲಿ ಬಾಗಲಕೋಟೆ ಜಿಲ್ಲಾಧಿಕಾರಿಗಳಿಗೆ ಕೂಡ ಮನವಿಯನ್ನು ಮಾಡಿಕೊಳ್ಳಲಾಗಿತ್ತು. ಆದರೆ ಇದುವರೆಗೆ ಸರ್ಕಾರವಾಗಲಿ ಮತ್ತು ಅಧಿಕಾರಿಗಳಾಗಲಿ ನೇಕಾರರ ಸಮಸ್ಯೆಗಳಿಗೆ ಸ್ಪಂದನೆ ಮಾಡಿಲ್ಲ. ನೇಕಾರರು ವಿದ್ಯುತ್ ಬಿಲ್ಲನ್ನು ಪಾವತಿಸುವುದಿಲ್ಲ ಎಂದು ನುಚ್ಚಿ ತಿಳಿಸಿದರು.

ಈ ಸಂದರ್ಭದಲ್ಲಿ ನೇಕಾರ ಮುಖಂಡರಾದ ಆನಂದ ಜಗದಾಳ, ಮುತ್ತು ಮಠದ, ಪರಮಾನಂದ ಭಾವಿಕಟ್ಟಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಗಣೇಶೋತ್ಸವದ ನಿಮಿತ್ಯ ರಂಗೋಲಿ ಸ್ಪರ್ಧೆ





**ಮೂಡಲಗಿ :** ಗಣೇಶೋತ್ಸವದ ನಿಮಿತ್ಯವಾಗಿ ಎಸ್ ಎಸ್ ಆರ್ ಪ್ರೌಢಶಾಲೆ ಮೂಡಲಗಿಯಲ್ಲಿ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಹಲವಾರು ವಿದ್ಯಾರ್ಥಿಗಳು ಭಾಗವಹಿಸಿದ್ದು ಅದರಲ್ಲಿ 8ನೇ ತರಗತಿಯಲ್ಲಿ ಲಕ್ಷ್ಮೀ ಕಮತನವರ ಪ್ರಥಮ. ಪ್ರೇರಣಾ ಖಾನಾಪುರ್ ದ್ವಿತೀಯ. ಪ್ರೀತಿ ಕಲಾಲ್ ತೃತೀಯ. 9ನೇ ತರಗತಿಯಲ್ಲಿ ಲಕ್ಷ್ಮಿ ಬಂಡಿ ವಡ್ಡರ ಪ್ರಥಮ. ಆಕಾಶ್ ಮೂಡಲಗಿ ದ್ವಿತೀಯ. ಸೃಷ್ಟಿ ಪೂಜೇರಿ ತೃತೀಯ.10ನೇ ತರಗತಿಯಲ್ಲಿ ಭರ್ಮಪ್ಪ ದಂಡಿನವರ ಪ್ರಥಮ.ಸಂಗೀತ ದಳವಾಯಿ ದ್ವಿತೀಯ ಭವ್ಯಾ ಖೋತ್ ತೃತಿಯ ಮಾರ್ಗದರ್ಶಕರಾಗಿ ಶಿಕ್ಷಕರಾದ ಎಸ್ ಎಸ್ ಕುರಣೆ. ಪ್ರೋತ್ಸಾಹ ಆರ್ ಎ ಹೊಸಟ್ಟಿ ಕಾರ್ಯನಿರ್ವಹಿಸಿದರು.

# ಬಡವರ ಜೀವನಕ್ಕೆ ಧರ್ಮಸ್ಥಳ ಬೆಳಕಾಗುತ್ತಿದೆ: ನ್ಯಾಮಗೌಡ

**ಜಮಖಂಡಿ :** ಧರ್ಮಸ್ಥಳ ಸಂಸ್ಥೆಯ ಸಾಮಾಜಿಕ ಸೇವಾ ಮನೋಭಾವನೆಗಳು ರಾಜ್ಯದ ಅಭಿವೃದ್ಧಿಯಲ್ಲಿ ಅಳಿಲು ಸೇವೆ ಸಲ್ಲಿಸುತ್ತಿದೆ. ಬಡವರ ಜೀವನಕ್ಕೆ ಬೆಳಕಾಗಿ ಕೆಲಸ ಮಾಡುತ್ತಿದೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು.

ನಗರದ ತಾಲೂಕ ಪಂಚಾಯತ ಸಭಾಭವನದಲ್ಲಿ ಗುರುವಾರ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಮ್ಮಿಕೊಂಡಿದ್ದ ಸುಜ್ಞಾನನಿಧಿ ಶಿಷ್ಯವೇತನ ಮಂಜೂರಾತಿ ಪತ್ರ ವಿತರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿ, ಮನೆಬಿಟ್ಟು ಬಾರದ ಮಹಿಳೆಯರು ಇಂದು ಧರ್ಮಸ್ಥಳ ಸಂಸ್ಥೆ ಸದಸ್ಯರಾಗಿ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಸದಸ್ಯರ ಮಕ್ಕಳಿಗೆ ವೃತ್ತಿಪರ ಶಿಕ್ಷಣಕ್ಕಾಗಿ ಶಿಷ್ಯವೇತನ ನೀಡುತ್ತಿರುವದು ವಿಶೇಷವಾಗಿದೆ ಎಂದರು.

ನಾನು ನಮ್ಮಿಂದ ಭಾವನೆಗಳನ್ನು ಬಿಟ್ಟರೇ ಮಾತ್ರ ಸಮಾಜ, ದೇಶ ಸುಧಾರಣೆಯಾಗಲಿದೆ. ಧರ್ಮಸ್ಥಳ ಸಂಸ್ಥೆ ಎಲ್ಲ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಹಿನ್ನಲೆಯಲ್ಲಿ ರಾಜ್ಯ, ದೇಶದಲ್ಲಿ ಮಾದರಿ ಸಂಸ್ಥೆಯಾಗಿ ಗುರುತಿಸಿಕೊಂಡಿದೆ. ವಿವಿಧ ಸಮಾಜದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸನ್ಮಾನದ ಜೊತೆಗೆ ಶಿಷ್ಯವೇತನ ನೀಡಿ ಗೌರವಿಸಿದರೇ ಶೈಕ್ಷಣಿಕವಾಗಿ ಮುಂದುವರೆಯಲು ಆರ್ಥಿಕ ಶಕ್ತಿ ತುಂಬಿದಂತಾಗುತ್ತದೆ ಎಂದರು.

ಕೊಪ್ಪಳದ ಪ್ರಾದೇಶಿಕ ನಿರ್ದೇಶಕ ಜೆ.ಚಂದ್ರಶೇಖರ ಮಾತನಾಡಿ, ರಾಜ್ಯದಲ್ಲಿ 46 ಸಾವಿರ, ಜಿಲ್ಲೆಯಲ್ಲಿ 6 ನೂರು, ಜಮಖಂಡಿ ತಾಲೂಕಿನಲ್ಲಿ 81 ವೃತ್ತಿಪರ ವಿಭಾಗದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಧರ್ಮಸ್ಥಳ ಯೋಜನೆ ಮೂಲಕ ಶಿಷ್ಯವೇತನ ನೀಡಲಾಗುತ್ತಿದೆ.

10ಸಾವಿರ ನಿರ್ಗತಿಕರಿಗೆ ಮಾಸಿಕ ಮಾಶಾಸನ, 350 ಜನರಿಗೆ ವಾತ್ಸಲ್ಯ ಮನೆ ನಿರ್ಮಾಣಕ್ಕೆ 1.5 ಲಕ್ಷ ಆರ್ಥಿಕ



ಸಹಾಯ, ದೇವಸ್ಥಾನ ಜೀರ್ಣೋದ್ಧಾರಕ್ಕೆ, ಸಮುದಾಯ ಭವನ ನಿರ್ಮಾಣಕ್ಕೆ, ಹಿಂದು ರುದ್ರಭೂಮಿ ಅಭಿವೃದ್ಧಿಗೆ ಅನುದಾನ ನೀಡಲಾಗುತ್ತಿದೆ. ರಾಜ್ಯದಲ್ಲಿ 1065 ಶಿಕ್ಷಕರಿಗೆ ಪ್ರತಿ ತಿಂಗಳು ಗೌರವ ಧನ ನೀಡುವ ಮೂಲಕ ಧರ್ಮಸ್ಥಳದ ಸಂಸ್ಥೆ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿದೆ ಎಂದರು.

ಯೋಗ ಮತ್ತು ಯೋಗ್ಯತೆ ಇದ್ದವರಿಗೆ ಮಾತ್ರ ಸೌಲಭ್ಯಗಳು ಲಭಿಸುತ್ತವೆ.

ಧಾನ ಧರ್ಮದಿಂದ ನಾವೆಲ್ಲರೂ ಸಮೃದ್ಧರಾಗಿ ಜೀವನ ಸಾಗಿಸಲು ಸಾಧ್ಯ. ಜಮಖಂಡಿ ಧರ್ಮಸ್ಥಳ ಸಂಸ್ಥೆ ತಾಲೂಕ ಘಟಕ ಕಳೆದ 12 ವರ್ಷಗಳಿಂದ ಸೇವೆಯಲ್ಲಿ ತೊಡಗಿದೆ. ಜಮಖಂಡಿ ಕ್ಷೇತ್ರ ಮತ್ತೊಂದು ಧರ್ಮಸ್ಥಳ ಕ್ಷೇತ್ರವಾಗಿ ಹೊರಹೊಮ್ಮಲಿ. ನಿರ್ಗತಿಕರಿಗೆ ಮಾಸಿಕ ಮಾಶಾಶನ ಜೊತೆಗೆ ಆಹಾರ ಕಿಟ್ ವಿತರಣೆ ಕಾರ್ಯಕ್ರಮ ಶೀಘ್ರದಲ್ಲಿ ಆರಂಭವಾಗಲಿದೆ. ಯಾರೊಬ್ಬರು ಶಿಕ್ಷಣದಿಂದ ವಂಚಿತರಾಗಬಾರದು. ತಂತ್ರಜ್ಞಾನ ಯುಗದಲ್ಲಿ ಪಾಲಕರು ಮಕ್ಕಳ ಮೇಲೆ ವಿಶೇಷ ಗಮನ ಹರಿಸಬೇಕು ಎಂದರು.

ಗೀತಾ ಸೂರ್ಯವಂಶಿ, ಪಂಡೀತ ಉಪಾಧ್ಯಯ ಮಾತನಾಡಿದರು.

ವೇದಿಕೆಯಲ್ಲಿ ನಗರಸಭೆ ಅಧ್ಯಕ್ಷ ಪರಮಾನಂದ ಗವರೋಜಿ, ಜಿಲ್ಲಾ ನಿರ್ದೇಶಕ ಚನ್ನಕೇಶವ, ತಾಲೂಕಾ ಯೋಜನಾಧಿಕಾರಿ ಜಿ.ನಿಂಗಪ್ಪ, ಶ್ರೀಧರ ಕನ್ನೂರ ಸಹಿತ ಹಲವರು ಇದ್ದರು.

ಎಂ.ಸರೋಜನಿ ಪ್ರಾರ್ಥಿಸಿದರು. ತಾಲೂಕ ಕೃಷಿ ಅಧಿಕಾರಿ ಚನ್ನಯ್ಯ ಸ್ವಾಗತಿಸಿದರು. ತಾಲೂಕಾ ಸಮನ್ವಯಾಧಿಕಾರಿ ಶ್ರೀದೇವಿ ನಿರೂಪಿಸಿದರು. ವಲಯ ಮೇಲ್ವಿಚಾರಕಿ ಪದ್ಮಾ ವಂದಿಸಿದರು.

# ಕೊಪ್ಪಳದಲ್ಲಿ ಪತ್ರಿಕಾಭವನ ನಿರ್ಮಾಣಕ್ಕೆ 10 ಲಕ್ಷ ಅನುದಾನ : ಸಂಸದ ರಾಜಶೇಖರ ಹಿಟ್ನಾಳ ಭರವಸೆ

**ಕೊಪ್ಪಳ :** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪತ್ರಿಕಾಭವನ ನಿರ್ಮಾಣಕ್ಕೆ 10 ಲಕ್ಷ ರೂ. ಅನುದಾನ ನೀಡಲಾಗುವುದು ಎಂದು ಕೊಪ್ಪಳ ಸಂಸದ ಕೆ.ರಾಜಶೇಖರ ಹಿಟ್ನಾಳ ಭರವಸೆ ನೀಡಿದರು.



ಅವರು ಶನಿವಾರದಂದು ನಗರದ ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಕರ್ನಾಟಕ ಕಾರ್ಯನಿರತಪತ್ರಕರ್ತರಸಂಘದಜಿಲ್ಲಾಘಟಕದಿಂದ ಆಯೋಜಿಸಲಾದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪತ್ರಿಕಾರಂಗ ಪವಿತ್ರವಾದ ರಂಗವಾಗಿದ್ದು, ಸಮಾಜ ತಿದ್ದುವಲ್ಲಿ ಪತ್ರಕರ್ತರ ಪಾತ್ರ ಮುಖ್ಯವಾಗಿದೆ. ಇಂದಿನ ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ಸಣ್ಣ ಪುಣ್ಣ ನೆಗೆಟಿವ್ ಅಂಶಗಳನ್ನು ವೈಭವೀಕರಿಸಿ ತೋರಿಸುತ್ತಿರುವುದು ಸಮಾಜದಲ್ಲಿ ಕೆಟ್ಟ ಪರಿಣಾಮ ಬೀರುತ್ತಿದೆ. ಕಾರಣ ಅಭಿವೃದ್ಧಿ ವಿಚಾರಗಳನ್ನು , ಉತ್ತಮ ಅಂಶಗಳ ವರದಿಗೆ ಹೆಚ್ಚು ಒತ್ತು ಕೊಟ್ಟರೆ ಸಮಾಜ ಅಭಿವೃದ್ಧಿ ಇನ್ನಷ್ಟು ಆಗಲು ಸಾಧ್ಯ ಎಂದು ಸಲಹೆ ನೀಡಿದರು. ಇನ್ನೂ ಈಗಾಗಲೇ ನಿವೇಶನ ಹೊಂದಿದ ನಮ್ಮ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪತ್ರಿಕಾಭವನ ನಿರ್ಮಾಣಕ್ಕೆ ಹತ್ತು ಲಕ್ಷ ರೂ ಅನುದಾನ ಕಲ್ಪಿಸುವುದಾಗಿ ಭರವಸೆ ನೀಡಿದರು.

ಬಳಿಕ ಪತ್ರಿಕಾ ದಿನಾಚರಣೆಯ ನಿಮಿತ್ತ ಆಯೋಜಿಸಲಾಗಿದ್ದ ಪತ್ರಕರ್ತರ ಕ್ರೀಡಾಕೂಟದಲ್ಲಿ ಜಯಗಳಿಸಿದ ಪತ್ರಕರ್ತರಿಗೆ ಬಹುಮಾನ ವಿತರಿಸಿ ಮಾತನಾಡಿದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಜಿ.ಸಿಲೋಕೇಶ್,ಕರ್ನಾಟಕಕಾರ್ಯನಿರತಪತ್ರಕರ್ತರ ಸಂಘದಿಂದ ಈಗಾಗಲೇ ಅನಾರೋಗ್ಯದಿಂದ ಸಂಕಷ್ಟಕ್ಕೀಡಾದ ಹಾಗೂ ಸಾವನ್ನಪ್ಪಿದ ಪತ್ರಕರ್ತರಿಗೆ ಪರಿಹಾರ ಹಣ ನೀಡಲಾಗಿದೆ. ಎರಡು ವರ್ಷದಲ್ಲಿ ಬರೋಬ್ಬರಿ 16 ಲಕ್ಷ ರೂ ಹಣವನ್ನು ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ನೀಡಲಾಗಿದೆ ಎಂದರು. ಇನ್ನು ಮಾಧ್ಯಮ ರಂಗವನ್ನು ಯೂಟ್ಯೂಬ್ ಚಾನೆಲ್ ಗಳು ಹಾಳು ಮಾಡುತ್ತಿದೆ. ಅನಧಿಕೃತವಾಗಿ ಇರೋ ಯೂಟ್ಯೂಬ್ ಚಾನಲ್ ಗಳು ಸುದ್ದಿ ವಾಹಿನಿಗಳ ರೀತಿಯಲ್ಲಿ ವರ್ತನೆ ಮಾಡ್ತಾ ಇರೋದು ಮಾಧ್ಯಮ ರಂಗಕ್ಕೆ ಅಪಾಯಕಾರಿ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಸ್ಥಾನ ವಹಿಸಿ ಮಾತನಾಡಿದ ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ, ನಾನು ಸಾಮಾನ್ಯ ಕಾರ್ಯಕರ್ತೆಯಾಗಿದ್ದ ಸಂಧರ್ಭದಿಂದ ಎಂಎಲ್ಸಿಯಾಗುವರೆಗೂ ನನ್ನ ಬೆಳವಣಿಗೆಗೆಪತ್ರಕರ್ತರಸಹಕಾರಅತಿಮುಖ್ಯವಾಗಿದೆ ಎಂದರು. ಇನ್ನೂ ಈಗಾಗಲೇ ಪತ್ರಿಕಾಭವನ ನಿರ್ಮಾಣಕ್ಕೆ 5 ಲಕ್ಷ ರೂ ಅನುದಾನ ನೀಡಿದ್ದೇನೆ. ಮುಂದಿನ ದಿನಮಾನಗಳಲ್ಲಿ ಹೆಚ್ಚಿನ ಅನುದಾನ ನೀಡುತ್ತೇನೆ ಎಂದು ಭರವಸೆ ನೀಡಿದರು.

ನಗರಸಭೆ ಅಧ್ಯಕ್ಷ ಅಮ್ಜದ ಪಟೇಲ್ ಮಾತನಾಡಿ, ಈಗಾಗಲೇ ನಗರಸಭೆಯಿಂದ ಪತ್ರಕರ್ತರಿಗೆ ನಿವೇಶನ ನೀಡಲು ಹಕ್ಕುಪತ್ರಗಳು ಸಿದ್ಧವಾಗಿದೆ. ಶಾಸಕರು ಶೀಘ್ರದಲ್ಲೇ ವಿತರಣೆ ಮಾಡುತ್ತಾರೆ ಎಂದರು. ಇಷ್ಟೇ ಅಲ್ಲದೆ ನಿವೇಶನ ನೀಡಿದ ಬಳಿಕ ನಗರಸಭೆಯಿಂದ ಮನೆಕಟ್ಟಿಸಿ ಕೊಡುತ್ತೇವೆ ಎಂದರು. ಪತ್ರಿಕಾ ಭವನ ನಿರ್ಮಾಣಕ್ಕೂ ಸಹ ನಗರಸಭೆಯಿಂದ 5 ಲಕ್ಷ ರೂ ಅನುದಾನ ನೀಡಲಾಗುವುದು ಎಂದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯ ಕೆ.ನಿಂಗಜ್ಜ ಮಾತಾನಾಡಿ, ಮಾಧ್ಯಮ ಅಕಾಡೆಮಿಯ ಪ್ರಶಸ್ತಿ ವಿತರಣೆಯಲ್ಲಿ ಎಲ್ಲಾ ಹಿರಿಯ ಪತ್ರಕರ್ತರ ಸಲಹೆ ಪಡೆದು, ಸೂಕ್ತವಾಗಿರುವವರಿಗೆ ನೀಡಲಾಗುವುದು ಎಂದರು.

ಕಾರ್ಯಕ್ರಮ ಅಧ್ಯಕ್ಷತೆವಹಿಸಿ ಮಾತನಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಗುಡ್ಲಾನೂರ ಮಾತನಾಡಿ, ಪತ್ರಿಕಾಭವನ ನಿರ್ಮಾಣಕ್ಕೆ ಅನುದಾನ ಘೋಷಣೆ ಮಾಡಿರುವ ಎಲ್ಲಾರಿಗೂ ಧನ್ಯವಾದಗಳು. ಅಲ್ಲದೆ ಗ್ರಾಮೀಣ ಪತ್ರಕರ್ತರಿಗೂ ಸಹ ಉಚಿತ ಬಸ್ ಪಾಸ್ ನೀಡಲು ರಾಜ್ಯ ಘಟಕ ಮುಖ್ಯಮಂತ್ರಿಗಳಿಗೆ ಒತ್ತಡ ಹೇರಿ ಆದೇಶ ಮಾಡಿಸಬೇಕು ಎಂದರು.

ಈ ಸಂಧರ್ಭದಲ್ಲಿ ನಗರಸಭೆಯ ಉಪಾಧ್ಯಕ್ಷೆ ಅಶ್ವಿನಿ ಗದುಗಿನಮಠ, ಜಿಲ್ಲಾವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ರಾಜ್ಯ ಸಮಿತಿ ಸದಸ್ಯ ದೇವರಾಜ್ ಇದ್ದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ರಾಜ್ಯ ಸಮಿತಿ ಸದಸ್ಯ ಎಂ.ಸಾದಿಕ ಅಲಿ ಮಾತನಾಡಿದರು. ಸ್ವಾಗತವನ್ನು ಜಿಲ್ಲಾ ಪ್ರಧಾನಕಾರ್ಯದರ್ಶಿ ನಾಗರಾಜ್. ವೈ ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಖಜಾಂಚಿ ರಾಜು.ಬಿ.ಆರ್, ಪತ್ರಿಕಾಭವನ ಕಟ್ಟಡ ಸಮಿತಿ ಅಧ್ಯಕ್ಷ ಎನ್.ಎಂ ದೊಡ್ಡಮನಿ ಯಶಸ್ವಿಯಾಗಿ ನಡೆಸಿಕೊಟ್ಟರು.

ಇದೇವೇಳೆಪತ್ರಿಕಾದಿನಾಚರಣೆನಿಮಿತ್ತಆಯೋಜಿಸಿದ್ದ ಪತ್ರಕರ್ತರ ಕ್ರೀಡಾಕೂಟದಲ್ಲಿ ಜಯಗಳಿಸಿದ ಪತ್ರಕರ್ತರಿಗೆ ರಾಜ್ಯ ಸಮಿತಿ ಸದಸ್ಯ ಹೆಚ್. ಎಸ್ ಹರೀಶ್, ಜಿಲ್ಲಾ ಉಪಾಧ್ಯಕ್ಷರಾದ ಹನುಮಂತ ಹಳ್ಳಿಕೇರಿ,ರುದ್ರಗೌಡ ಪಾಟೀಲ್,ಜಿಲ್ಲಾ ಕಾರ್ಯದರ್ಶಿ ವೀರಣ್ಣ ಕಳ್ಳಿಮನಿ, ಚಾಂದ್ ಸಿಂಗ್, ಮಂಜುನಾಥ ಅಂಗಡಿ ವಿತರಿಸಿದರು. ಈ ಸಂಧರ್ಭದಲ್ಲಿ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೆರವೇರಿಸಲಾಯಿತು. ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿದ ಕ್ರೀಡಾ ಸಮಿತಿ, ಪ್ರತಿಭಾ ಪುರಸ್ಕಾರ ಸಮಿತಿಗೆ ಜಿಲ್ಲಾ ಘಟಕ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು . ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲೆಯ ಎಲ್ಲಾ ತಾಲೂಕಿನ ಪದಾಧಿಕಾರಿಗಳು, ಜಿಲ್ಲಾ ಘಟಕದ ಪದಾಧಿಕಾರಿಗಳು,ಸರ್ವಸದಸ್ಯರುಪಾಲ್ಗೊಂಡಿದ್ದರು.

# ಫೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿ ತರಬೇತಿ ಸಮಾರಂಭ

## ಫೋಟೊಗ್ರಾಫಿ ಉದ್ಯೋಗಸ್ಥರಿಗೆ ಹೆಚ್ಚಿನ ಪ್ರಾಮುಖ್ಯತೆಯಾಗಿದೆ: ಪುಂಡಲಿಕ ಕೆ.ಬಡಿಗೇರ

**ಬೆಳಗಾವಿ :** ಇತ್ತೀಚಿನ ದಿನಮಾನದಲ್ಲಿ ಫೋಟೊಗ್ರಾಫಿ ಉದ್ಯೋಗಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನ ಹೊಂದಿದೆ. ಪ್ರತಿಯೊಂದು ಸಮಾಜದಲ್ಲಿ ನಿರಂತರವಾಗಿ ಬೆಳೆಯುತ್ತಿರುವ ಮಾಧ್ಯಮವಾಗಿದ್ದು, ತರಬೇತಿಯಲ್ಲಿ ಪಡೆದ ಕೌಶಲ್ಯಗಳನ್ನು ತಮ್ಮ ವೃತ್ತಿಪರ ಜೀವನಕ್ಕೆ ಸದುಪಯೋಗ ಮಾಡಿಕೊಂಡು ಪ್ರತಿಯೊಂದು ಮಾಧ್ಯಮದಲ್ಲಿ ಮುಂದುವರೆದು ಸಮಾಜ ಮುಖ್ಯವಾಹಿನಿಗೆ ಬರಬೇಕೆಂದು ಹಿರಿಯ ಪತ್ರಕರ್ತರು ಮತ್ತು ಛಾಯಾಗ್ರಾಹಕರು ಪುಂಡಲಿಕ ಕೆ. ಬಡಿಗೇರ ಇವರು ಹೇಳಿದರು.

ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ ಬೆಳಗಾವಿಯಲ್ಲಿ ಕಳೆದ 30 ದಿನಗಳಿಂದ ನಡಿದಿರುವ ಫೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿ ತರಬೇತಿ ಶಿಬಿರದ ನಡೆದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ಫೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿ ಇನ್ನೂ ಹೆಚ್ಚಿನ ಬದಲಾವಣೆಗಳು ಬರಲಿದ್ದು, ಅದೆಲ್ಲವನ್ನು ಎದುರಿಸಲು ನೀವೂ ಕಾರ್ಯಪ್ರವತ್ತರಾಗಿರಿ. ಕಲಿಕೆಯೂ ನಿರಂತರವಾಗಿರಲಿ. ಕಲಿತಿರುವುದು ಕೇವಲ ಸಾಗರದಲ್ಲಿಯ ಒಂದು ಬಿಂದುವಿನಷ್ಟು ಮಾತ್ರ. ಕೆಲಸದಲ್ಲಿ ತಾಳ್ಮೆ, ಸಮಯ ಪ್ರಜ್ಞೆ, ಶಿಸ್ತು ಎಲ್ಲವನ್ನೂ ಕಲಿತಿರಬೇಕು ಅಂದಾಗ ಮಾತ್ರ ಯಶಸ್ವಿನ ಹಾದಿ ಹಿಡಿಯಲು ಸಾಧ್ಯ ಶಿಭಿರಾರ್ಥಿಗಳಿಗೆ ತಿಳಿಸಿದರು.

ತರಬೇತಿಯ ಸಂಪನ್ಮೂಲ ವ್ಯಕ್ತಿಯಾದ ನಾಗರಾಜ ಎಸ್.ದಶಮನಿ ಇವರು ಮಾತನಾಡುತ್ತಾ. ಇಲ್ಲಿ ಕಲಿತಿರುವ ತರಭೇತಿಯನ್ನು ಸರಿಯಾದ ಕ್ರಮದಲ್ಲಿ ಉಪಯೋಗಿಸಿಕೊಂಡು ಮುಂದೆ ಸಾಗಿರಿ. ಜೊತೆಗೆ ಉದ್ಯೋಗದಲ್ಲಿ ಯಶಸ್ವಿಯಾಗಿರಿ ಎಂದು ಶಿಭಿರಾರ್ಥಿಗಳಿಗೆ ಶುಭ ಹಾರೈಸಿದರು.

ಕೆನರಾ ಬ್ಯಾಂಕ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರಾದ ಪ್ರವೀಣ ಕೆ.ಎಸ್. ಅವರು ಮಾತನಾಡಿ, ನಿವೆಲ್ಲರೂ ತರಬೇತಿಯನ್ನು ಪಡೆದಿರುವಿರಿ, ಆದರೆ ಕಲಿಕೆ ಇಲಿಗೆ ಮುಕ್ತಾಯವಲ್ಲ, ಕಲಿಕೆಯು ನಿರಂತರವಾಗಿರಲ್ಲಿ ಅಂದಾಗ ಮಾತ್ರ ನೀವೂ ಯಶಸ್ವಿಯಾಗಲೂ ಸಾಧ್ಯ ಎಂದು ತಿಳಿಸಿದರು.ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಎಲ್ಲ ಸಿಬ್ಬಂದಿ ವರ್ಗದವರು ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

“SIHI KAHI” Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State